ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 30-47
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಕರಾನಿರಾಕರಣೆ ಹಾಗೂ ಅರಣ್ಯ ಸತ್ಯಾಗ್ರಹಗಳು : ಒಂದು ಐತಿಹಾಸಿಕ ಅಧ್ಯಯನ

**ಮಧುಸೂಧನ್.ಸಿ[1] ಮತ್ತು ಡಾ.ಎಸ್.ನಾಗರತ್ನಮ್ಮ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

***Abstract:***
*ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ರೈತರ ಕರಾನಿರಾಕರಣೆ ಚಳುವಳಿ ಹಾಗೂ ಅರಣ್ಯ ಸತ್ಯಾಗ್ರಹಗಳು ಮಹತ್ವದ ಘಟ್ಟಗಳಾಗಿ ಹೊರಹೊಮ್ಮಿವೆ. ಈ ಅಧ್ಯಯನವು ಬ್ರಿಟಿಷರ ಕಾಲಘಟ್ಟದಲ್ಲಿ ಜಾರಿಗೊಂಡ ದಮನಕಾರಿ ಭೂಮಿ ಕರನೀತಿಗಳು ಹಾಗೂ ಅರಣ್ಯ ಕಾನೂನುಗಳ ವಿರುದ್ಧ ಗ್ರಾಮೀಣ ಸಮಾಜ ಮತ್ತು ಬುಡಕಟ್ಟು ಜನಾಂಗಗಳು ನಡೆಸಿದ ಹೋರಾಟಗಳನ್ನು ವಿಶ್ಲೇಷಿಸುತ್ತದೆ. ರೈತರು ಅತಿಯಾದ ತೆರಿಗೆ ಮತ್ತು ಅನ್ಯಾಯಕರ ಭೂಸಂಕಲನ ಕ್ರಮಗಳಿಗೆ ವಿರೋಧವಾಗಿ ಕರಾನಿರಾಕರಣೆ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರೆ, ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರು ತಮ್ಮ ಜೀವನಾಧಾರವಾದ ಅರಣ್ಯ ಸಂಪತ್ತಿನ ಮೇಲಿನ ಹಕ್ಕುಗಳನ್ನು ಉಳಿಸಿಕೊಳ್ಳಲು ಅರಣ್ಯ ಸತ್ಯಾಗ್ರಹಗಳನ್ನು ಕೈಗೊಂಡರು. ಈ ಸಂಶೋಧನೆ ಈ ಚಳುವಳಿಗಳ ಉಗಮ, ಬೆಳವಣಿಗೆ ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವುದರ ಜೊತೆಗೆ, ಅವುಗಳು ಭಾರತೀಯ ರಾಷ್ಟ್ರೀಯ ಚಳುವಳಿಯೊಂದಿಗೆ ಹೊಂದಿದ ಸಂಬಂಧವನ್ನು ಪರಿಶೀಲಿಸುತ್ತದೆ. ವಿಶೇಷವಾಗಿ, ಸ್ಥಳೀಯ ನಾಯಕರ ಪಾತ್ರ, ಜನಸಾಮಾನ್ಯರ ಭಾಗವಹಿಸುವಿಕೆ ಮತ್ತು ಹೋರಾಟದ ವಿಧಾನಗಳು ಈ ಅಧ್ಯಯನದ ಪ್ರಮುಖ ಅಂಶಗಳಾಗಿವೆ. ಇವುಗಳು ಕೇವಲ ಆರ್ಥಿಕ ಹಕ್ಕುಗಳಿಗಾಗಿ ನಡೆದ ಹೋರಾಟಗಳಷ್ಟೇ ಅಲ್ಲ, ಸಾಮಾಜಿಕ ನ್ಯಾಯ ಮತ್ತು ಸ್ವಾಭಿಮಾನಕ್ಕಾಗಿ ನಡೆದ ಜನಆಂದೋಲನಗಳೆಂಬುದನ್ನು ಈ ಅಧ್ಯಯನವು ತಿಳಿಸುತ್ತದೆ.*

***Keywords:*** *ಜಪ್ತಿ, ಕರಬಂದಿ, ಹರತಾಳ, ಸತ್ಯಾಗ್ರಹ, ರೈತರ ಕರಾನಿರಾಕರಣೆ ಹಾಗೂ ಅರಣ್ಯ ಸತ್ಯಾಗ್ರಹಗಳು.*

**ಪೀಠಿಕೆ**

ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಸಮಕಾಲೀನ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯೊಡನೆ ಹುಟ್ಟಿಕೊಂಡ ಒಂದು ವ್ಯವಸ್ಥೆಯೇ ರೈತರ ಚಳುವಳಿ. ಭಾರತದಲ್ಲಿ ಇಲ್ಲಿಯವರೆಗೆ ಸಾಕಷ್ಟು ರೈತ ಚಳುವಳಿಗಳು, ಸತ್ಯಾಗ್ರಹಗಳು, ಪ್ರತಿಭಟನೆಗಳು ನಡೆದಿವೆ. ಸ್ವಾತಂತ್ರ್ಯ ಪೂರ್ವ ರೈತ ಚಳುವಳಿಗಳು ಹೆಚ್ಚಾಗಿ ಪರಕೀಯರ ವಿರುದ್ಧ ನಡೆದವು ಭೂಮಿಯನ್ನು ಕಳೆದುಕೊಂಡ ಪಾಳೆಯಗಾರರು, ಹಳೆಯ ಪ್ರಭುಗಳು, ಆಡಳಿತಗಾರರು, ದಿವಾಳಿ ಎದ್ದ ರೈತರು, ಕೈ ಕಸುಬುಗಳನ್ನು ಕಳೆದುಕೊಂಡವರು, ಕೂಲಿ ಕಾರ್ಮಿಕರು ಹಾಗೂ ಆದಿವಾಸಿ ಮುಖಂಡರುಗಳು ಕೂಡ ಭಾಗವಹಿಸಿದ್ದಾರೆ,

***Please cite this article as:*** ಮಧುಸೂಧನ್.ಸಿ ಮತ್ತು ಎಸ್. ನಾಗರತ್ನಮ್ಮ. (2026). ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಕರಾನಿರಾಕರಣೆ ಹಾಗೂ ಅರಣ್ಯ ಸತ್ಯಾಗ್ರಹಗಳು: ಒಂದು ಐತಿಹಾಸಿಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(1), 30–47

ತೀವ್ರಗಾಮಿ ಎಡಪಂಥೀಯ ಹೋರಾಟಗಳು ಈ ಗುಂಪಿನಲ್ಲಿ ಬರುತ್ತವೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರೈತ ಚಳುವಳಿಗಳು ಜನತಾ ಆಂದೋಲನಗಳಾಗಿ ಪರಿವರ್ತನೆಯಾದವು.

ಮೊಘಲರು ಜಾರಿಗೆ ತಂದಂತಹ ಹೊರ ರೀತಿಯ ಭೂ ವಿಂಗಡಣೆ, ಹಂಚಿಕೆ ಹಾಗೂ ಕಂದಾಯ ನಿಗದಿ ಕ್ರಮ ಭಾರತದ ಭೂ ಒಡೆತನದ ನೆಲೆಯನ್ನು ಅಲ್ಲಾಡಿಸಿತು. ಅದರ ಪರಿಣಾಮವಾಗಿ ಬೇರೆ ಬೇರೆ ರೀತಿಯಲ್ಲಿ ರೈತರು ಸಂಘಟಿತರಾದರು. ಕೆಲಮಟ್ಟಿಗೆ ಆಡಳಿತ ವ್ಯವಸ್ಥೆಯನ್ನು ಪ್ರಶ್ನಿಸಿದರು. ಮೊಘಲರು ಈ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿಯೇ ಸಮ್ಮಿಲನವಾಗಿದ್ದರಿಂದ ಆ ಕಾಲದ ರೈತ ಪ್ರತಿಭಟನೆಗಳು ಹೆಚ್ಚು ಸಾಮೂಹಿಕ ಸ್ವರೂಪ ಪಡೆದುಕೊಂಡಂತೆ ಕಾಣುವುದಿಲ್ಲ. ಆದರೆ ಬ್ರಿಟಿಷರು ಹೊರಗಿನಿಂದ ಭಾರತಕ್ಕೆ ಬಂದವರಾದರೂ ಇಲ್ಲಿಯವರಾಗಲಿಲ್ಲ. ವ್ಯವಸಾಯವನು ವಾಣಿಜ್ಯೀಕರಣಗೊಳಿಸಿ ಭಾರತದ ವ್ಯವಸಾಯನಿಕ ಉತ್ಪನ್ನಗಳು ಇಂಗ್ಲೆಂಡಿನ ಕೈಗಾರೀಕರಣವನ್ನು ಅಭಿವೃದ್ಧಿಗೊಳಿಸುವ ಸಾಧನವಾದವು. ಸರ್ಕಾರದ ಬೊಕ್ಕಸ ತುಂಬಲು ಹಾಗೂ ತಮ್ಮ ಯುದ್ಧ ವೆಚ್ಚವನ್ನು ಭರಿಸಲು ಬ್ರಿಟಿಷರು ಭಾರತದ ವ್ಯವಸಾಯವನ್ನು ಅವಲಂಬಿಸಿರುವ ರೈತರ ಮೇಲೆ ಅತಿ ಹೆಚ್ಚು ತೆರಿಗೆಯನ್ನು ವಿಧಿಸಿದರು. ನೇರ ಕಂದಾಯವನ್ನು ವಸೂಲಿ ಮಾಡಲು ಕೃಷಿಕರ ಮಧ್ಯೆ ಅನೇಕ ಬಗೆಯ ಮಧ್ಯವರ್ತಿಗಳನ್ನು ತಂದರು. ಹೊಸ ಭೂಮಾಲೀಕರು, ಜಹಗೀರುದಾರರು, ಇನಾಂದಾರರು, ವ್ಯಾಪಾರಿಗಳು, ಅಧಿಕಾರಿಗಳು ಸ್ಥಾಪಿತರಾದರು. ಅನೇಕ ರೈತರು ಭೂಮಿಯನ್ನು ಕಳೆದುಕೊಂಡು ಕೂಲಿಗಳಾದರು. ಸ್ವಯಂ ಬೇಸಾಯ ಸಂಸ್ಕೃತಿಯನ್ನು ಅನುಸರಿಸುವ ಆದಿವಾಸಿಗಳ ಮೇಲೆ ಇದು ತೀವ್ರ ಪರಿಣಾವನ್ನು ಬೀರಿತು. ಆದಿವಾಸಿಗಳು ಹೊಸ ಜಮೀನುದಾರರ ಕೈ ಕೆಳಗೆ ಬರುವಂತಾಯಿತು. ಸ್ಥಳೀಯ ಗುಡಿ ಕೈಗಾರಿಕೆಗಳು ನಾಶವಾದವು. ವಾಣಿಜ್ಯ ಬೆಳೆಗಳನ್ನು ಬೆಳೆಯಲು ಒತ್ತಾಯಿಸಲಾಯಿತು. ಆಹಾರ ಬೆಳೆಗಳು ಗಣನೀಯವಾಗಿ ಕಡಿಮೆಯಾದವು.[1]

ಸಾಮಾನ್ಯರ ಜೀವನ ನಿರ್ವವಣೆ ಕಷ್ಟವಾಯಿತು. ತೆರಿಗೆ ಕೊಟ್ಟು ಉಳಿದುದರಲ್ಲಿ ಜೀವನ ಸಾಗಿಸುವುದು ದುಸ್ತರವಾಯಿತು. ಈ ಕಾರಣದ ಮೇಲೆ ಆದಿವಾಸಿ ಕೃಷಿಕರು, ಬೇರೆ ಬೇರೆ ನೆಲೆಯಲ್ಲಿ ಕೃಷಿ ಮಾಡುತ್ತಿದ್ದ ರೈತರು, ಸ್ಥಳೀಯ ಭೂ ಮಾಲೀಕರನ್ನು ಹಾಗೂ ಪರೋಕ್ಷವಾಗಿ ಬ್ರಿಟಿಷರನ್ನು ವೊರೋಧಿಸುವುದು ಅನಿವಾರ್ಯವಾಯಿತು. ಸ್ವಾತಂತ್ರ್ಯ ಪೂರ್ವದ ರೈತ ಹೋರಾಟಗಳು ಪ್ರಾದೇಶಿಕವಾವು ಅವುಗಳ ಉದ್ದೇಶ ಕೂಡ ಸೀಮಿತವಾಗಿರುತ್ತಿತ್ತು. ಸದ್ಯದ ನೋವಿಗೆ ಪರಿಹಾರ ಕೊಂಡುಕೊಳ್ಳುವುದು ಮುಖ್ಯ ಆಪೇಕ್ಷೆಯಾಗಿತ್ತು. ಶತ್ರುಗಳನ್ನು ಸಮಸ್ಯೆಗಳನ್ನು ಸ್ಪಷ್ಟವಾಗಿ ಗುರುತಿಸಿ ಹೋರಾಡುವ ಭೂಮಿಕೆ ಇನ್ನೂ ಸಿದ್ಧವಾಗಿರಲಿಲ್ಲ. ಬಹಳ ಮುಖ್ಯವಾಗಿ ಈ ಹೋರಾಟಗಳು ತಮ್ಮ ಪೂರ್ವಾಶ್ರಮ ಜೀವತತ್ವ ಹಾಗೂ ವರ್ಗಗಳಿಂದ ಹೊರಗೆ ಬರಲು ಇಚ್ಛಿಸಲಿಲ್ಲ.

ಚರಿತ್ರೆಯ ಕೆಲವು ಪ್ರಮುಖ ರೈತ ಹೋರಾಟಗಳನ್ನು ನೋಡುವುದಾದರೆ,

- 1728– ಸನ್ಯಾಸಿ– ಪಕೀರರ ದಂಗೆ
- 1855–ಸಂತಾಲರ ದಂಗೆ
- 1860– ನೀಲಿ ಬೆಳೆಗಾರರ ಚಳುವಳಿ
- 1785– ದಕ್ಷಿಣದ ದಂಗೆಗಳು
- 1836–1931–ಮಾಪಿಳ್ಳೆ ದಂಗೆಗಳು
- 1945–46–ರ ಆದಿವಾಸಿಗಳು ಹೋರಾಟ
- 1946–47 – ತೇಭಾಗ ಚಳುವಳಿ

ರೈತಾಪಿ ಜನರ ಪ್ರತಿಭಟನೆಗಳು ಬ್ರಿಟಿಷರ ಆಡಳಿತ ಹಾಗೂ ಕಂದಾಯ ನೀತಿಯನ್ನು ಪ್ರತಿಭಟಿಸಿದಾಗ ಬ್ರಿಟಿಷ್ ಸೈನ್ಯ ಹಳ್ಳಿ ಹಳ್ಳಿಗಳನ್ನೇ

[1] Ranajith Guha.,(1983), the elementary aspects of peasant insurgency in colonial India, oxford university press, Newdelhi.

ನಾಶ ಮಾಡುತ್ತಿತ್ತು. ಈ ಘಟನೆಗಳಿಂದ ನೆಲೆ ಕಳಿದುಕೊಂಡವರು ಸಂಘಟಿತರಾಗಿ ಬ್ರಿಟಿಷರ ಪರವಾಗಿದ್ದ ಭೂಮಾಲೀಕರನ್ನು, ಆಡಳಿತಗಾರರನ್ನು, ಅವರ ಸೇವಕರನ್ನು, ಹಿಡಿದು ಬಡಿಯುತ್ತಿದ್ದರು. ಬಿಹಾರ ಬಂಗಾಳ ಹಾಗೂ ಪೂರ್ವ ಈಶಾನ್ಯದ ಭಾರತದ ಹಲವು ಪ್ರದೇಶಗಳಿಗೆ ಈ ದಂಗೆಗಳು ಹರಡಿದ್ದವು. ಭಾರತಕ್ಕೆ ಸ್ವಾತಂತ್ರ್ಯ ಬರುವ ಸಾಧ್ಯತೆ ಕಂಡಂತೆಲ್ಲಾ ಸ್ವಾತಂತ್ರ ಸಿಕ್ಕಿದ ಆರಂಭದ ದಿನಗಳ ತನಕ ರೈತ ಹೋರಾಟಗಳು ಹೊಸ ದಿಕ್ಕನ್ನು ಪಡೆದವು. ಬೇಡಿಕೆಗಳು ಸಮಾನತಾ ಅವಕಾಶಗಳಾಗಿ ಮಾರ್ಪಟ್ಟವು. ಸರ್ವಾಧಿಕಾರದ ವಿರುದ್ಧ ಪ್ರಜಾಪ್ರಭುತ್ವವನ್ನು ಬಲಪಡಿಸುವ ಶಕ್ತಿಯಾಗಿ ಮಾರ್ಪಟ್ಟಿತು. ಬೇಡಿಕೆಗಳನ್ನು ಹಕ್ಕುಗಳ ಒತ್ತಾಯಗಳಾಗಿ ಕೆಳಗಿನಂತೆ ಮಂಡಿಸಲಾಯಿತು.

- ಉಳುವವನಿಗೆ ಭೂಮಿ, ಹಾಗೂ ಭೂಮಿಯನ್ನು ಭೂಹೀನರಿಗೆ ಹಂಚುವುದು.
- ಲಾಭದಾಯಕ ಬೆಲೆಗಾಗಿ ಹೊರಾಟ.
- ಸಾಲದ ಹೊರೆಯಿಂದ ಮುಕ್ತಿ.
- ಲೆವಿ, ತೆರಿಗೆ ಸರಬರಾಜುಗಳ ವಿರುದ್ಧ ಚಳುವಳಿ,
- ಕೃಷಿ ಕೂಲಿಗಳಿಗೆ ಕನಿಷ್ಟ ವೇತನ ನಿಗದಿ
- ಗುಡಿ ಕೈಗಾರಿಕೆಗಳಿಗೆ ಆದ್ಯತೆ
- ಕೈಗಾರಿಕೆ ಮತ್ತು ಕೃಷಿ ಬೆಳೆಗಳ ಬೆಲೆಗಳಲ್ಲಿ ಸಮಾನತೆ ತರುವುದು.

ಮೇಲಿನ ಅನೇಕ ಬೇಡಿಕೆಗಳನ್ನು ಈಡೇರಿಸಲು ಒತ್ತಡ ಹಾಕಲಾಯಿತು. ರೈತ ಹೋರಾಟಗಳಿಂದ ಕರ್ನಾಟಕ ಹೊರಗೆ ಉಳಿದಿಲ್ಲ ಭೂ ಮಾಲೀಕರ, ಲೇವಾದೇವಿಗಾರರ ವಿರುದ್ಧ ಅನೇಕ ಹೋರಾಟಗಳು ನಡೆದಿವೆ.[2]

**ಸ್ವಾತಂತ್ರ್ಯ ಪೂರ್ವ ರಾಜ್ಯ ರೈತ ಚಳುವಳಿಗಳು**

"ಭಾರತೀಯ ಶಕ್ತಿ ಕೂಟದಲ್ಲಿ ರೈತನ ಶಕ್ತಿ ಸ್ಥಾನವನ್ನು ಗಮನಿಸಿ ಹೇಳಿದರೆ ಶೋಷಣಾ ಶಕ್ತಿ ಕೂಟವಾದ ಜಮೀನುದಾರ, ಸಾಹುಕಾರ, ಆಳುವ ವರ್ಗದ ಶೋಷಣೆ ವಿರುದ್ಧ ಸಂಘಟಿತರಾಗಿ ನಡೆಸುವ, ನಡೆಸಿದ ಪ್ರಗತಿಪರ ಹೋರಾಟದ ನೆಲೆಯೇ ರೈತ ಶಕ್ತಿಯ ನೆಲೆ", ವರ್ತಮಾನದಲ್ಲಿ ರೈತರು ನಡೆಸುವ ಚಳುವಳಿಗೂ ಗತಕಾಲದಲ್ಲಿ ನಡೆದ ರೈತರ ಪ್ರತಿಭಟನೆಗಳಿಗೂ, ಚಳುವಳಿಗೂ ಸ್ವಲ್ಪ ಭಿನ್ನತೆ ಇದೆ. ಹಾಗಾಗಿ ಗತಕಾಲದಲ್ಲಿ ಅವಲೋಕಿಸುವ ಮೂಲಕ ಭವಿಷ್ಯತ್ಕಾಲವನ್ನು ಹೇಗೆ ರೂಪಿಸಿಕೊಳ್ಳಬೇಕು ಎನ್ನುವ ಇರಾದೆ ಈ ಆಧ್ಯಾಯಕ್ಕಿದೆ.

ಕರ್ನಾಟಕದಲ್ಲಿ ರೈತರ ಸಮಸ್ಯೆ, ರೈತರ ಚಳುವಳಿ ಹಾಗೂ ಅವರ ಪ್ರಶ್ನೆಯನ್ನು ಮುಂದಿಟ್ಟುಕೊಂಡು ನೂರಾರು ರೈತ ಚಳುವಳಿಯ ಹೋರಾಟಗಳಿವೆ. ಇವುಗಳಲ್ಲಿ ಕೆಲವು ಆಡಳಿತಾಗರರ, ಭೂಮಾಲೀಕರ, ವಸಾಹತುಶಾಹಿಯ ವಿರುದ್ಧ ಹೋರಾಡಿದಂತಹ ಅನೇಕ ಹೋರಾಟಗಳಿವೆ. ಬಹುತೇಕ ಸ್ವಾತಂತ್ರ್ಯ ಪೂರ್ವ ರೈತರ ಚಳುವಳಿಗಳು ಆಡಳಿತಗಾರರನ್ನೇ, ಭೂಮಾಲೀಕರನ್ನೇ, ಕುರಿತವುಗಳಾಗಿದ್ದು, ಅಂತಹ ಪ್ರಮುಖ ಚಳುವಳಿಗಳನ್ನು ನಾವು ಹೆಸರಿಸುವುದಾದರೆ ಚಿಕ್ಕ ದೇವರಾಜ ಒಡೆಯರ ಕಾಲದಲ್ಲಿ ಆದಂತಹ ರೈತ ಚಳುವಳಿಗಳು, ಟಿಪ್ಪು ಕಾಲದ ರೈತ ಚಳುವಳಿಗಳು, ನಗರದಂಗೆ, ಕೆನರಾ ಬಂಡಾಯ, ಉತ್ತರ ಕನ್ನಡದ ಹುಲಬನ್ನಿ, ಶಿರಸಿ–ಸಿದ್ಧಾಪುರ ತಾಲ್ಲೂಕುಗಳ ಕರನಿರಾಕರಣೆ, ಇರ್ವಿನ್ ನಾಲ ರೈತಾ ಚಳುವಳಿ, ಈಸೂರು ರೈತ ಚಳುವಳಿ, ರಾಮದುರ್ಗ ಕರನಿರಾಕರಣ ಚಳುವಳಿ, ಮುಂತಾದ ಚಳುವಳಿಗಳನ್ನು ಹೆಸರಿಸಬಹುದಾಗಿದ್ದು, ಅಂತಹ ಸ್ವಾತಂತ್ರ ಪೂರ್ವ ಮತ್ತು ಸ್ವಾತಂತ್ರ್ಯೋತ್ಸವ ಕರ್ನಾಟಕದಲ್ಲಿ ನಡೆದಂತಹ ಕೆಲವು ಪ್ರಮುಖ ರೈತ

[2] Gyanenndra pandey. (1978), Peasant and nationalism in colonial India,Oxford university press,New Delhi.

ಚಳುವಳಿಗಳನ್ನು ನಾವು ಇಲ್ಲಿ ಈ ಒಂದು ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

**ಚಿಕ್ಕ ದೇವರಾಜ ಒಡೆಯರ ಕಾಲದ ರೈತ ಚಳುವಳಿ 1183 ರಿಂದ 84**

ಮೈಸೂರು ರಾಜ್ಯದ ರೈತ ಹೋರಾಟದ ಇತಿಹಾಸದಲ್ಲಿ ಮೊಟ್ಟಮೊದಲ ರೈತ ಹೋರಾಟ ನಡೆದಿದ್ದು, ಅದು ಚಿಕ್ಕ ದೇವರಾಜ ಒಡೆಯರ ಕಾಲದಲ್ಲಿ ಇವರು ತಮ್ಮ ಆಡಳಿತ ಅವಧಿಯಲ್ಲಿ ರಾಜ್ಯದ ಭೂ ಕಂದಾಯವನ್ನು ಸಾಕಷ್ಟು ಸುಧಾರಿಸಿದರು ಕೂಡ ರೈತರು ಕಂದಾಯ ವಿರುದ್ಧ, ತೆರಿಗೆಗಳ ವಿರುದ್ಧ ತಮ್ಮ ಅಸಮಾಧಾನವನ್ನು ಹೊರಹಾಕಿದ್ದನ್ನು ನಾವು ಗಮನಿಸಬಹುದು. ಒಡೆಯರ ಕಾಲದಲ್ಲಿ ಸುಮಾರು 19 ತರಹ ವಿವಿಧ ಹೊಸ ತೆರಿಗೆಗಳನ್ನು ರೈತರ ಮೇಲೆ ವಿಧಿಸಿದ್ದರಿಂದ ರೈತರು ತೆರಿಗೆಯನ್ನು ಪಾವತಿಸಲಾಗದೆ ಅಸಮಾಧಾನ ಹೊರ ಹಾಕಿರುವುದು ಚರಿತ್ರೆಯ ಅಧ್ಯಯನದಿಂದ ತಿಳಿಯುತ್ತದೆ. ಮನೆದೆರಿಗೆ, ಹುಲ್ಲುಬಣ, ಎರಸುಂಕ, ಸಮಯಾಚಾರ, ದನಕರು ಮಾರಿದ್ದಕ್ಕೆ ಸುಂಕ, ಉಬ್ಬೆ ಕಾಣಿಕೆ, ಕುರಿ ತೆರಿಗೆ, ಅಂಗಡಿ ಪಟ್ಟಿಡಿ, ಮಗ್ಗದ ಕಂದಾಯ, ಮದುವೆ ತೆರಿಗೆ, ಉಪ್ಪಿನ ತೆರಿಗೆ, ಗಿಡಕಾವಲು ಹೀಗೆ 19 ತರಹದ ಈ ಎಲ್ಲಾ ತೆರಿಗೆಗಳನ್ನು ಕಟ್ಟಲು ಶಾನುಭೋಗ, ಕೋಲುಗಾರ ಮುಂತಾದವರನ್ನು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ನೇಮಿಸಿದ್ದರಿಂದ ರೈತರಿಗೆ ಅಸಮಾಧಾನ ಉಂಟಾಯಿತು. ವ್ಯವಸಾಯ ಮಾಡಿದವರು 5 ವರ್ಷದವರೆಗೆ 1/3 ಪಾಲು ಕಂದಾಯ ನೀಡಬೇಕಾಗಿತ್ತು. ಒಡೆಯರ ಕಾಲದಲ್ಲಿ ರೈತರ ಸ್ಥಿತಿಯು ಉತ್ತಮವಾಗಿದ್ದರೂ ಕೂಡ ಬಣರಾಜಕೀಯ, ಅಸೂಹೆ, ರಾಜಕೀಯ ಸಂಘರ್ಷ, ಅಧಿಕಾರದ ವಿವೇಚನಾ ರಹಿತ ದುರ್ಬಳಕೆ, ಮಧ್ಯವರ್ತಿಗಳ ಹಾವಳಿ ಹಾಗೂ ರಾಜರು ಮಧ್ಯವರ್ತಿಗಳ ಮಾತಿಗೆ ಬೆಲೆ ನೀಡಿದ್ದರಿಂದ ರೈತರು ಶೋಷಣೆಗೆ ಒಳಗಾಗಿ ರೈತರು 17ನೇ ಶತಮಾನದಲ್ಲಿ ವಿಶಿಷ್ಟ ಬಗೆಯ ರೈತ ಚಳುವಳಿಗೆ ನಾಂದಿ ಹಾಡಿದರು.

ರೈತರು ಅರಮನೆಗೆ ಕೊಡುವಂತಹ ಕಂದಾಯ ವಾರದ ದವಸ ಕೊಡಲು ನಿರಾಕರಿಸಿದರು. “ಕಾಡು ಭೂಮಿಯನ್ನು ಬಸವಣ್ಣ ಉಳುತ್ತಾನೆ, ದೇವೇಂದ್ರರು ಮಳೆಯನ್ನು ಸುರಿಸುತ್ತಾನೆ, ನಾವು ಕಷ್ಟಪಟ್ಟು ಪೈರು ಮಾಡಿ ನಿಮಗೇತಕ್ಕೆ ತೆರಿಗೆ ಕೊಡಬೇಕೆಂದು” ಹೇಳಿ ಅರಮನೆಯ ಕಾನೂನನ್ನು ವಿರೋದಿಸಿದರು. ಇದರಿಂದ ಕುಪಿತಗೊಂಡ ದೊರೆಯು ಅಂತಹ ರೈತರನ್ನು ಸೆರೆಹಿಡಿದು ಶಿಕ್ಷೆಗೆ ಗುರಿಪಡಿಸಿದನು. ಅಲ್ಲದೆ ಅವರ ಎಲ್ಲಾ ಆಸ್ತಿಯನ್ನು ವಶಪಡಿಸಿಕೊಂಡನು. ಮುಂದುವರೆದು ಸುಮಾರು 19 ಹೊಸ ತೆರಿಗೆಗಳನ್ನು ರೈತರಲ್ಲಿ ಮತ್ತಷ್ಟು ಅಸಮಾಧಾನವನ್ನು ಮೂಡಿಸಿದವು. ಈ ತೆರಿಗೆಗಳನ್ನು ವಿರೋಧಿಸಿ ರೈತರು ಬಂಡೆದ್ದರು ಇದಕ್ಕೆ ಜಂಗಮ ಸನ್ಯಾಸಿಗಳು ನಾಯಕತ್ವ ವಹಿಸಿದರು. ಇದರಿಂದ ಕುಪಿತಗೊಂಡ ರಾಜನು ಅನೇಕ ಜಂಗಮ ಮತ್ತು ರೈತ ಮುಖಂಡರನ್ನು ಕರೆಸಿ ರಹಸ್ಯವಾಗಿ ಸುಮಾರು 400 ಜನರನ್ನು ಕೊಲ್ಲಿಸಿದನು. ಇದರಿಂದ ಹೆದರಿದ ರೈತರು ಅಸಹಾಯಕರಾಗಿ ರಾಜ ವಿಧಿಸಿದ ಎಲ್ಲಾ ತೆರಿಗೆಗಳನ್ನು ಕೊಡಲು ಒಪ್ಪಿದರು. ಪರಿಣಾಮವಾಗಿ ರೈತರ ಆರ್ಥಿಕ ಸಂಕಷ್ಟಗಳನ್ನು ಮತ್ತಷ್ಟು ಉಲ್ಬಣಗೊಂಡವು. ಈ ರೈತ ಹೋರಾಟದಲ್ಲಿ ವೀರಶೈವ ಜಂಗಮರ ಪಾತ್ರ ಗಣನೀಯವಾಗಿತ್ತು. ಹಾಗಾಗೀ ಈ ಹೋರಾಟವು ಸ್ವಲ್ಪ ಮಟ್ಟಿನ ಜಾತಿಯ ಸ್ವರೂಪ ಪಡೆದುಕೊಂಡಿದೆ ಎಂದು ಹೇಳಬಹುದು.

**ಟಿಪ್ಪು ಕಾಲದ ಅಧಿಕಾರಶಾಹಿ ವಿರುದ್ಧ ರೈತರ ಪ್ರತಿಭಟನೆ**

ಟಿಪ್ಪುಸ್ತುಲಾನನ ಕಾಲದಲ್ಲಿ ರೈತರ ಸ್ಥಿತಿ ಉತ್ತಮವಾಗಿದ್ದರೂ ಕೂಡ ಮೀರ್ ಸಾಧಿಕ ಎಂಬ ಮಂತ್ರಿಯ ಕುಟಿಲ ತಂತ್ರಗಳಿಗೆ ಟಿಪ್ಪು ಮಣೆಹಾಕಿ ರೈತರಿಗೆ ಜಾರಿಗೆ ಮಾಡಿದಂತಹ ಕೆಲವು ಸುಧಾರಣೆಗಳು ರೈತರ ಅಸಮಾಧಾನಕ್ಕೆ

ಕಾರಣವಾದವು. ಶ್ರೀರಂಗಪಟ್ಟಣ ಸಮೀಪದ್ಧ ರೈತರು ಕಂದಾಯಕ್ಕಿಂತ ಹೆಚ್ಚು ಹಣವನ್ನು ದಂಡದ ರೂಪದಲ್ಲಿ ತೆರಿಗೆಯನ್ನು ನೀಡುತ್ತ ಬಂದಿದ್ದರೂ ಅವರಿಗೆ ಹಿಂಸೆ ಕಿರುಕುಳ ತಪ್ಪಲಿಲ್ಲ. ಇದರಿಂದ ಬೇಸತ್ತ ರೈತರು ದುಷ್ಟ ಅಧಿಕಾರಿಗಳ ಕಿರುಕುಳದ ವಿರುದ್ಧ ಟಿಪ್ಪುವಿನ ಬಳಿ ಬಂದು ದೂರು ಸಲ್ಲಿಸಿದರು. ರೈತರ ದೂರಿನಲ್ಲಿ ಸತ್ಯಾಂಶವಿದ್ದರೂ ಅಧಿಕಾರಿಗಳ ತಪ್ಪನ್ನು ಮುಚ್ಚಿಡಲು ನಿರ್ಧರ್ಸಿದ ಮಂತ್ರಿ ಮೀರ್ ಸಾಧಿಕನು ರೈತರ ಬಳಿ ಬಂದು ಕುಟಿಲ ನಾಟಕ ಮಾಡುತ್ತಾ ಶೇಕಡ 37,1/2 ಪ್ರಕಾರ ಹೆಚ್ಚು ತೆರಿಗೆ ಕೊಡುವುದಕ್ಕೆ ಒಪ್ಪಿಕೊಳ್ಳುವುದಾದರೆ ಇನ್ನು ಮುಂದೆ ಯಾವ ವಿಧವಾಗಿಯೂ ಕಂದಾಯಕ್ಕಿಂತ ಹೆಚ್ಚು ತೆರಿಗೆ ವಸೂಲಿ ಮಾಡುವುದಿಲ್ಲ ಮತ್ತು ರೈತರಿಗೆ ತಂಬಾಕು ಬೆಳೆಯುವ ಸ್ವಾತಂತ್ರ್ಯ ನೀಡಲಾಗುವುದು ಎಂದನು. ಅಧಿಕಾರಿಗಳ ನಿರಂತರ ಶೋಷಣೆ ಮತ್ತು ದೌರ್ಜನ್ಯದಿಂದ ಬೇಸತ್ತಿದ್ದ ರೈತರು ಸಂಕಷ್ಟದಿಂದ ಪಾರಾದರೆ ಸಾಕೆಂದು ಹೆಚ್ಚು ತೆರಿಗೆ ಕೊಡಲು ಒಪ್ಪಿದರು. ರೈತರ ಒಪ್ಪಿಗೆಯನ್ನು ಟಿಪ್ಪುವಿನ ಬಳಿ ತಿರುಚಿ ರೈತರು ಹೆಚ್ಚು ಕರ ಕೊಡಲು ಒಪ್ಪಿರುವುದೇ ಅವರ ದೂರು ಸುಳ್ಳೆಂದು ತೋರಿಸುತ್ತದೆ ಎಂದು ತಪ್ಪಾಗಿ ಅರ್ಥೈಸಿ ಟಿಪ್ಪುನನ್ನು ನಂಬಿಸಿದನು. ಇದರಿಂದ ಕೋಪಗೊಂಡ ಟಿಪ್ಪು ರೈತ ಮುಖಂಡನಾದ ಪಟೇಲನನ್ನು ಗಲ್ಲಿಗೇರಿಸಿದನು. ಇದರಿಂದ ಹೆದರಿಗೆ ರೈತರು ಹೋರಾಟದಿಂದ ಹಿಂದೆ ಸರಿದರು. ಆದರೂ ಟಿಪ್ಪು ರೈತರ ಆರ್ಥಿಕ ಸ್ಥಿತಿಗತಿ ಸುಧಾರಿಸಲು ಅವನು ತಂದಂತಹ ಯೋಜನೆಗಳು ರೈತರಿಗೆ ಲಾಭದಾಯಕವಾಗಿ ಅವರ ಜೀವನ ಸುಧಾರಿಸಿತು.[3]

ಜಮೀನುದಾರರ ಅಧಿಕಾರವನ್ನು ಕಡಿಮೆಗೊಳಿಸಿ, ಧಾರ್ಮಿಕ ದತ್ತಿ ಭೂಮಿಯನ್ನು ವಶಪಡಿಸಿಕೊಳ್ಳುವ ಮೂಲಕ ರೈತರನ್ನು ಸಂರಕ್ಷಿಸಿದನು. ಉಳಿಗಮಾನ್ಯ ವಿರೋಧಿ ಭೂ ಸುಧಾರಣೆಗಳನ್ನು ತೆರವುಗೊಳಿಸುವ ಮೂಲಕ ಪಾಳೆಗಾರರ ವಿರುದ್ಧ ಕ್ರಮ ಕೈಗೊಂಡು ಜಹಗೀರುಗಳನ್ನು ರದ್ದು ಪಡಿಸಿದನು. ಟಿಪ್ಪುವಿನ ಕಾಲದಲ್ಲಿ ಆದ ಮಹತ್ವದ ಸುಧಾರಣೆ ಎಂದರೆ ರೇಷ್ಮೆ ಕೃಷಿಯ ವಿಸ್ತರಣೆ. ಮೈಸೂರಿನ 21 ಕೇಂದ್ರಗಳಲ್ಲಿ ಮಲ್ಬರಿ (ಹಿಪ್ಪು ನೇರಳೆ) ಕೃಷಿಯನ್ನು ವಿಸ್ತರಿಸಿದನು. ಸೈನ್ಯದಲ್ಲಿ ಸೈನಿಕರಿಗೆ ಭೂಮಿ ನೀಡುವ ಪದ್ಧತಿಯನ್ನು ನಿಲ್ಲಿಸಿದನು. ರೈತರನ್ನು ಗಮನಿಸುತ್ತಿದ್ದ ಪಟೇಲರ ಪಾರಂಪರಿಕ ಹಿಡುವಳಿಗಳನ್ನು ಪರಿಷ್ಕರಿಸಿದನು. 1787 ರಲ್ಲಿ ಹೊರಡಿಸಿದ್ದ ಟಿಪ್ಪುವಿನ ಕಂದಾಯ ನಿಯಮಾವಳಿಗಳು ಉಳಿಮೆದಾರ ಅಥವಾ ಅವನ ವಾರಸುದಾರರು ಕಂದಾಯವನ್ನು ಸರಿಯಾಗಿ ಕೊಡುತ್ತಿದ್ದರೆ ಅವರ ಜಮೀನನ್ನು ಉಳುಮೆಯಿಂದ ಬಿಡಿಸುವಂತಿಲ್ಲ, ಭೂಮಾಲಿಕ ಸ್ವತಃ ಜಮೀನನ್ನು ಸಾಗುವಳಿ ಮಾಡುತ್ತಿರಬೇಕು ಎಂದು ಆಜ್ಞೆ ಹೊಡಡಿಸಿದನು.

### ನಗರ ರೈತರ ದಂಗೆ 1831

ಮೈಸೂರು ಸಂಸ್ಥಾನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಡೆದ ನಗರದಂಗೆ ಮೈಸೂರು ಸಂಸ್ಥಾನದಲ್ಲಿ ನಡೆದ ಅತಿ ದೊಡ್ಡ ರೈತ ಬಂಡಾಯವಾಗಿದ್ದು, ಒಡೆಯರ ಹಾಗೂ ಬ್ರಿಟಿಷರ ಮೈತ್ರಿಕೂಟವು ನಡೆಸಿದ ಆಡಳಿತದಲ್ಲಿ ರೈತರ ಮೇಲಾದ ದಬ್ಬಾಳಿಕೆಯ ತೆರಿಗೆ ಆಡಳಿತಾತ್ಮಕ ದುರಾಡಳಿತ ಮತ್ತು ಸಾಮಾಜಿಕ ಅಸಮಾನತೆಗಳ ವಿರುದ್ಧ ನಡೆದ ರೈತರ ಹತಾಶಯ ಪ್ರಬಲ ಅಭಿವ್ಯಕ್ತಿಯ ರೂಪವೆಂದರೆ ಅದು ನಗರ ರೈತರ ದಂಗೆ ಈ ನಗರ ರೈತ ದಂಗೆಯು ಕೇವಲ ಹಾರ್ಥಿಕ ಸಂಕಷ್ಟಕ್ಕೆ ಪ್ರತಿಕ್ರಿಯೆ ಆಗಿರದೆ, ಘನತೆ ಮತ್ತು ನ್ಯಾಯಕ್ಕಾಗಿ ಕೂಗು ಕೂಡ ಆಗಿತ್ತು ಇದು ಸರ್ದಾರ್ ಮಲ್ಲ ನೇತೃತ್ವದಲ್ಲಿ ಸಾಮಾನ್ಯ ರೈತರು ಆಳುವ ಗಣ್ಯರು ಮತ್ತು ಅವರ ಬ್ರಿಟಿಷ್ ಬೆಂಬಲಿಗರ ಶಕ್ತಿಯನ್ನು ಪ್ರಶ್ನಿಸಿದ ಚಳುವಳಿಯಾಗಿತ್ತು. ದಂಗೆಯನ್ನು ಅಂತಿಮವಾಗಿ ಹತ್ತಿಕ್ಕಲಾಗದಿದ್ದರೂ

[3] ರಹಮತ್ ತರೀಕೆರೆ., (2012), ಕರ್ನಾಟಕ ರೈತ ಚಳುವಳಿಗಳು, ಪ್ರಸಾರಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ.

ಮೈಸೂರಿನಲ್ಲಿ ಸಾಮೂಹಿಕ ಪ್ರತಿರೋಧದ ಶಕ್ತಿಯನ್ನು ಎತ್ತಿ ತೋರಿಸುವ ಮತ್ತು ಭವಿಷ್ಯದ ಆಡಳಿತ ಸುಧಾರಣೆಗಳ ಮೇಲೆ ಪ್ರಭಾವ ಬೀರುವ ಶಾಶ್ವತ ಪರಂಪರೆಯನ್ನು ಬಿಟ್ಟಿತು.

1830 ರಲ್ಲಿ ಹೈಕಮಲ್ಲ ಸಾಮಾನ್ಯ ನಾಯಕ ನಗರದಲ್ಲಿ ಅರಸನೆಂದು ಘೋಷಿಸಿಕೊಂಡು ಬೋದಿಬಸಪ್ಪ ಎಂಬ ಹೆಸರಿನೊಡನೆ ಬಿದನೂರು ರಾಣಿ ವೀರಮ್ಮಾಜಿ ಮೊಮ್ಮಗನೆಂದು ಘೋಷಿಸಿಕೊಂಡು ರೈತರನ್ನು ಸಾಮಾನ್ಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರೈತರಲ್ಲಿ ಹಲವು ಭರವಸೆಗಳನ್ನು ನೀಡಿದನು. 1831 ರಲ್ಲಿ ನಗರದ ಭಾಗದ ದಂಗೆಕೋರರು ತರೀಕೆರೆಯ ಪಾಳೇಗಾರರ ವಂಶಸ್ಥರಾದ ರಂಗಪ್ಪನಾಯಕ ಮತ್ತು ಅವನ ಮಗ ಹನುಮಪ್ಪ ನಾಯಕ ಹಾಗೂ ಅವನ ಸಹೋದರನ ಮಗ ಸರ್ಜಪ್ಪ ನಾಯಕನನ್ನು ಪ್ರಚೋದಿಸಿ ಅವರಲ್ಲೂ ತಮ್ಮ ಹಿಂದಿನ ಪಾಳೆ ಪಟ್ಟನ್ನು ಮತ್ತೆ ಪಡೆಯುವ ಆಸೆ ಚಿಗುರಿಸಿದನು. ಈ ಪ್ರಚೋದನೆಯಿಂದ ರಂಗಪ್ಪನಾಯಕ ರೈತರನ್ನು ಒಗ್ಗೂಡಿಸಿ ದಂಗೆಯ ನೆಪದಲ್ಲಿ ಮುಂದುವರೆದು ಬೋಧಿ ಬಸಪ್ಪನಿಗೆ ಸಹಕರಿಸಿದನು. ತೆರಿಗೆ ವ್ಯವಸ್ಥೆಯ ವಿರುದ್ಧ ತಮ್ಮ ಕುಂದುಕೊರತೆಗಳನ್ನು ವ್ಯಕ್ತಪಡಿಸಲು ರೈತರು ಕುಟುಂಬಗಳು ಎಂಬ ಸಾಮೂಹಿಕ ಸಂಘಗಳನ್ನು ಆಯೋಜಿಸುವ ಮೂಲಕ ರೈತರು ತಮ್ಮ ತೆರಿಗೆ ಪಾವತಿಸುವುದನ್ನು ಮತ್ತು ಭೂಮಿಯನ್ನು ಸಾಗುವಳಿ ಮಾಡುವುದನ್ನು ನಿಲ್ಲಿಸಲು ಕರೆ ನೀಡಿದನು. ಬೂದಿಬಸಪ್ಪ ನಗರ ಪ್ರಾಂತ್ಯದಲ್ಲಿ ಸಂಚರಿಸುತ್ತಾ ರೈತರನ್ನು ಸಂಘಟಿಸಿ ಮೈಸೂರು ಸರ್ಕಾರದ ವಿರುದ್ಧ ಹೋರಾಟ ನಡೆಸಲು ಮುಂದಾದನು ಸಾಗರ ತಾಲ್ಲೂಕು ಆನಂದಪುರದ ಬಳಿಯ ಹೂಸಂತೆ ಎಂಬ ಗ್ರಾಮದಲ್ಲಿ ಏರ್ಪಡಿಸಿದ್ದ ಬಹಿರಂಗ ರೈತರ ಸಭೆಯಲ್ಲಿ ಸಾವಿರಾರು ರೈತರು ಭಾಗವಹಿಸಿದ್ದರು ಈ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಬೂದಿಬಸಪ್ಪನ ಪ್ರತಿನಿಧಿ ಮಾನಪ್ಪ ಮತ್ತು ಇತರ ಐದು ಮಂದಿ ನಾಯಕರು ಮೈಸೂರಿಗೆ ಹೋಗಿ ರೈತರ ಎಂಟು ಬೇಡಿಕೆಗಳನ್ನು ಮಹಾರಾಜರ ಮುಂದಿಟ್ಟರು ಬೇಡಿಕೆ ಒಂದು ಸಾಗುವಳಿ ಮಾಡುತ್ತಿರುವ ಭೂಮಿಗಳ ಹಕ್ಕನ್ನು ಆಯಾ ರೈತರಿಗೆ ನೀಡಿ ಗೇಣಿ ಪದ್ಧತಿಯನ್ನು ರದ್ದುಗೊಳಿಸುವುದು, ಕಂದಾಯ ಬಾಕಿಗಾಗಿ ಹರಾಜು ಮಾಡಿರುವ ರೈತರ ಭೂಮಿಗಳನ್ನು ಹಿಂದಿರುಗಿಸುವುದು, ರೈತ ಕುಟುಂಬದ ಮೇಲಿದ್ದ ತಲೆತಲಾಂತರದ ಸಾಲ ಹಾಗೂ ಕಂದಾಯ ರದ್ದು, ಕುಟುಂಬದ ಗಾತ್ರ ಅನುಸರಿಸಿ ರೈತರಿಗೆ ಸಾಗುವಳಿ ಭೂಮಿ ವಿತರಣೆ; ಬೇಸಾಯ ಮಾಡದೆ ಬೀಳು ಬಿಟ್ಟಿರುವ ಭೂಮಿಗಳನ್ನು ರೈತರಲ್ಲಿ ಹಂಚಿಕೆ, ಮುಂದಿನ ಐದು ವರ್ಷಗಳವರೆಗೆ ರೈತರಿಗೆ ಎತ್ತು ಮತ್ತು ಬೀಜಗಳನ್ನು ಕೊಳ್ಳಲು ನೇರವು, ಮುಂದಿನ 10 ವರ್ಷಗಳವರೆಗೆ ಕಂದಾಯ ವಿನಾಯಿತಿ ಈಗಿರುವ ಶರತ್ ಪದ್ಧತಿಯನ್ನು ಕೂಡಲೇ ರದ್ದುಗೊಳಿಸುವುದು ಇತ್ಯಾದಿ[4]

ಈ ಮನವಿಯನ್ನು ಸಾರಾ ಸಘಟ್ಟಾಗಿ ತಳ್ಳಿ ಹಾಕಿದ ಸರ್ಕಾರ ಚಳುವಳಿಗೆ ಸೇರಿದ ರೈತರನ್ನು ನಿರ್ದಾಕ್ಷಿಣ್ಯವಾಗಿ ಬಂಧಿಸಿ ತಕ್ಕ ಶಿಕ್ಷೆ ನೀಡಬೇಕೆಂದು ಅಮಲ್ದಾರರು ಮತ್ತು ಆದೇಶ ಕಳುಹಿಸಿತು. ಪರಿಣಾಮ ದಂಗೆ ಇತರೆ ಭಾಗಗಳಿಗೂ ಹರಡಿ ರೈತರು ಸೈನಿಕರನ್ನು ಎದುರಿಸುವ ಸಲುವಾಗಿ ಗ್ರಾಮ ದಳಗಳನ್ನು ರಚಿಸಿ ಹೋರಾಟಕ್ಕೆ ಹೇಳಿದರು. ಬಳ್ಳಾರಿ ಜಿಲ್ಲೆ, ಭಟ್ಟರಹಳ್ಳಿ ರೈತರು ಕೂಡ ಬೆಂಬಲ ನೀಡಿ ಚಳುವಳಿಯಲ್ಲಿ ಭಾಗವಹಿಸಿ ಜಮೀನ್ದಾರರ ಮನೆಗಳು ಮತ್ತು ವರ್ತಕರ ಅಂಗಡಿಗಳನ್ನು ಲೂಟಿ ಮಾಡಿದರು. 1830ರ ಹೊತ್ತಿಗೆ ದಂಗೆಯು ನಗರವನ್ನು ಮೀರಿ ಬೆಂಗಳೂರು, ಚಿತ್ರದುರ್ಗ ಮತ್ತು ಮಂಜರಬಾದ್ ನಂತಹ ಪ್ರದೇಶಗಳಿಗೆ ಹರಡಿತು. ದಂಗೆಕೋರರು ಮಸ್ಕಿಟ್ಗಳೊಂದಿಗೆ ಶಸ್ತ್ರ ಸಜ್ಜಿತರಾಗಿ

[4] ಎಂ.ಜಿ. ನಾಗರಾಜ್. (2006),ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು, ಸಹಸ್ರಮಾನ ಸಂಪುಟ 02, ಪ್ರಕಟಣೆ ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ– ವಿಧಾನಸೌಧ, ಬೆಂಗಳೂರು.

ಮತ್ತು ಕೂಲಿ ಸೈನಿಕರ ಬೆಂಬಲದೊಂದಿಗೆ ಪ್ರಮುಖ ಕೋಟೆಗಳನ್ನು ಮುತ್ತಿಗೆ ಹಾಕಿದರು.

ದಂಗೆಯು, ಶಿವಮೊಗ್ಗ, ಚಿತ್ರದುರ್ಗ, ದೊಡ್ಡಬಳ್ಳಾಪುರ, ಅರಕಲಗೂಡು, ಮೂಳೆ ಹೊನ್ನೂರು ತರೀಕೆರೆ ಆನವಟ್ಟಿ ಮುಂತಾದ ಕಡೆ ಹಬ್ಬಿತು. ದಿವಾನರು ದಂಗೆ ಹಡಗಿಸಲು ಪ್ರಯತ್ನ ಪಟ್ಟರು ಸಾಧ್ಯವಾಗಲಿಲ್ಲ. ಡಿಸೆಂಬರ್ 18, 1830 ರಂದು ಕೃಷ್ಣರಾಜ ಒಡೆಯರ್ ಮೂರು ಮಂಜರಾಬಾದ್ನ ಚನ್ನರಾಯಪಟ್ಟಣಕ್ಕೆ ಭೇಟಿ ನೀಡಿ ನೆರೆದಿದ್ದ ರೈತರನ್ನು ಚದುರಿಸಲು ಆದೇಶಿಸಿದರು. ಅವರು ನಿರಾಕರಿಸಿದಾಗ ಸೈನ್ಯವೂ 5 ರೈತರನು ಗಲ್ಲಿಗೇರಿಸಿತು ಮತ್ತು ಇತರರನ್ನು ತಲುಪಿತು. ಇದು ದಂಗೆಯನ್ನು ಮತ್ತಷ್ಟು ತೀವ್ರಗೊಳಿಸಿತು. ಈ ದಂಗೆಯು ತೀವ್ರಗೊಳ್ಳುತ್ತಿದ್ದಂತೆ 1831 ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮಧ್ಯಪ್ರವೇಶಿಸಿತು. ಆರಂಭದಲ್ಲಿ ಸಲಹೆಗಾರರು ಮತ್ತು ಹಸ್ತಕ್ಷೇಪ ಮಾಡದ ಮಿಲಿಟರಿ ಉಪಸ್ಥಿತಿಯೊಂದಿಗೆ ಆದಾಗಿಯೂ ಮಾರ್ಚ್ 1831 ರ ಹೊತ್ತಿಗೆ ಫಿರಂಗಿದಳದ ಬೆಂಬಲದೊಂದಿಗೆ ಸ್ಥಳೀಯ ಪದಾತಿದಳ ಮತ್ತು ಅಶ್ವತಲದ ಸಕ್ರಿಯ ರೆಜಿಮೆಂಟ್‌ಗಳನ್ನು ನಿಯೋಜಿಸಲಾಯಿತು. ಮಾರ್ಚ್ 26, 1831 ರ ಹೊತ್ತಿಗೆ ನಗರ ಪಟ್ಟಣವನ್ನು ಮತ್ತೆ ವಶಪಡಿಸಿಕೊಳ್ಳಲಾಯಿತು.

ಕರ್ನಲ್ ಮಾಲ್ ನೇತೃತ್ವದ ಬ್ರಿಟಿಷ್ 24ನೇ ರೆಜಿಮೆಂಟ್ ಬಸವಪ್ಪನಿಗೆ ಸಹಾಯ ಮಾಡದಂತೆ ಮರಾಠ ಅಶ್ವ ಸೈನ್ಯವನ್ನು ತಡೆದು ಜೂನ್ 1831 ರ ಹೊತ್ತಿಗೆ ಬ್ರಿಟಿಷ್ ಮತ್ತು ಮೈಸೂರು ಪಡೆಗಳು ಪ್ರಮುಖ ಕೋಟೆಗಳು ಮತ್ತು ಪಟ್ಟಣಗಳ ಮೇಲೆ ಹಿಡಿತ ಸಾಧಿಸಿದವು. ಅಕ್ಟೋಬರ್ 1931 ರಂದು ಕೃಷ್ಣರಾಜ ಒಡೆಯರ್ ಮೂರು ತಮ್ಮ ಆಳ್ವಿಕೆಯನ್ನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ಒಪ್ಪಿಸಿದರು. ಡಿಸೆಂಬರ್ 21 ರಂದು ಸರಕಾರವು ಆಜ್ಞೆಯೊಂದನ್ನು ಹೊರಡಿಸಿ ರೈತರ ಅಧಿಕ ಕಂದಾಯ ಸರ್ಕಾರಿ ಅಧಿಕಾರಿಗಳ ಕಿರುಕುಳ ಮುಂತಾದವುಗಳ ಬಗೆಗಿನ ಮನವಿಯನ್ನು ಪರಿಶೀಲಿಸಿ, ರೈತರಿಗೆ ಹೊರೆ ಎನಿಸಿದ ಅನೇಕ ತೆರಿಗೆಗಳನ್ನು ವಜಾ ಮಾಡಿದನು. ಕಂದಾಯ ಪ್ರಮಾಣವನ್ನು ಕಡಿಮೆ ಮಾಡಿದರು. ಮತ್ತೊಂದಡೆ ತರೀಕೆರೆ ಪಾಳೆಗಾರ ರಂಗಪ್ಪನಾಯಾಕ್ ಬೂದಿಬಸಪ್ಪ ಜೊತೆಯಾಗಿ ದಂಗೆಯನ್ನು ತೀವ್ರಗೊಳಿಸಿದರು. ದಂಗೆಯಲ್ಲಿ ಸುಮಾರು ಏಳು ಸಾವಿರ ಜನರು ಭಾಗವಹಿಸಿದ್ದರು ಅಡಗಿಸಿತು ಕೊನೆಗೆ ರಾಜರ ಅಸಮರ್ಥತೆಯ ಕಾರಣ ನೀಡಿ ಮೈಸೂರನ್ನು ಬ್ರಿಟಿಷರು ತಮ್ಮ ನೇರ ಆಡಳಿತಕ್ಕೆ ಒಳಪಡಿಸಿಕೊಂಡು ಕಮಿಷನರ್‌ಗಳನ್ನು ನೇಮಿಸಿದರು. ಒಟ್ಟಾರೆ ಅಧಿಕ ಕಂದಾಯ ಹೆಚ್ಚಳದ ವಿರುದ್ಧ ನಗರದಲ್ಲಿ ಆರಂಭವಾದ ದಂಗೆ ಹರಸುತ್ತಿಗೆ ಅಧಿಕಾರ ಕಳೆದುಕೊಳ್ಳಲು ಕಾರಣವಾಯಿತು.[5]

**1890ರ ಕರ ನಿರಾಕರಣ ಚಳುವಳಿ ಅಥವಾ ಕೆನರಾ ಬಂಡಾಯ**

ಮದ್ರಾಸ್ ಪ್ರಾಂತ್ಯದ ಜಿಲ್ಲಾಧಿಕಾರಿಯಾಗಿದ್ದ ಥಾಮಸ್ ಮನ್ರೋ ಕೆನರವನ್ನು 1859 ರಲ್ಲಿ ಉತ್ತರ ಮತ್ತು ದಕ್ಷಿಣ ಕೆನರಾ ಜಿಲ್ಲೆಗಳಾಗಿ ವಿಂಗಡಿಸಿದ್ದನು. ಅಂತಿಮವಾಗಿ ಬ್ರಿಟಿಷರು 1862 ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಬಾಂಬೆ ಪ್ರೆಸಿಡೆನ್ಸಿಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಮದ್ರಾಸ್ ಪ್ರಾಂತ್ಯಕ್ಕೂ ಬಿಲ್ಲಿನಗೊಳಿಸಲಾಯಿತು. ಜಿಲ್ಲೆಯ ಅವಿಭಾಜ್ಯ ಅಂಗವನ್ನು ಮುರಿದಾಗ ರೈತರು ದಂಗೆ ಎದ್ದರೂ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಕರ್ನಾಟಕದ ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಕಾರವಾರದಿಂದ ಕೇರಳದ ಕಾಸರಗೋಡು ಜಿಲ್ಲೆಯವರೆಗಿನ ಭೂ ಪ್ರದೇಶವನ್ನು ಮತ್ತು ಲಕ್ಷ ದ್ವೀಪಗಳನ್ನು ಒಳಗೊಂಡ ಪ್ರದೇಶವನ್ನು 1999 ರಲ್ಲಿ ಪ್ರತ್ಯೇಕ ಜಿಲ್ಲೆಯನ್ನಾಗಿ ಅಂದರೆ ಕೆನರಾ ಎಂದು ಘೋಷಿಸಿತು. ಮೇಜರ್ ಜನರಲ್ ಸರ್ ಥಾಮಸ್ ಮನ್ರೋ ಅವರನ್ನು ಮೊದಲ ಕಲೆಕ್ಟರ್ ಆಗಿ ನೇಮಿಸುವುದರೊಂದಿಗೆ

[5] ಶಾಂತ ರಾಮ ನಾಯಕ ಹಿರೇಗುತ್ತಿ (1998)ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆಯ ಪಾತ್ರ, ರಾಘವೇಂದ್ರ ಪ್ರಕಾಶನ, ಅಂಕೋಲ.

ಜಿಲ್ಲೆಯ ಆಡಳಿತ ಘಟಕದ ಪ್ರಯಾಣ ಪ್ರಾರಂಭವಾಯಿತು.

1857 ರವರೆಗೆ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿತ್ತು. ನಂತರ ಬ್ರಿಟಿಷ್ ಸರ್ಕಾರವು ಅದನ್ನು 1862 ರಲ್ಲಿ ಉತ್ತರ ಕೆನರಾ ಜಿಲ್ಲೆಯನ್ನು ಈ ಭಾಗದಿಂದ ಬೇರ್ಪಡಿಸಿ ಬಾಂಬೆ ಪ್ರೆಸಿಡೆನ್ಸಿಗೆ ಹಸ್ತಾಂತರಿಸಲಾಯಿತು. ಉಳಿದ ಪ್ರದೇಶವನ್ನು ದಕ್ಷಿಣ ಕೆನರಾವನ್ನು ಮದ್ರಾಸ್ ಪ್ರೆಸಿಡೆನ್ಸಿಯ ಭಾಗವನ್ನಾಗಿ ಮಡಲಾಯಿತು.

ಅಂದಿನಿಂದ 1947 ರಲ್ಲಿ ನಾವು ಸ್ವಾತಂತ್ರ್ಯ ಪಡೆಯುವವರೆಗೂ ಈ ಪ್ರದೇಶವು ಬ್ರಿಟಿಷ್ ಸರ್ಕಾರದ ಆಡಳಿತದಲ್ಲಿತ್ತು. ಭಾಷಾವಾರು ಆದಾರದ ಮೇಲೆ ರಾಜ್ಯಗಳನ್ನು ಮರು ಸಂಘಟಿಸುವ ಅಗತ್ಯವಿರುವ ರಾಜ್ಯಗಳ ಪುನರ್ ವಿಂಗಡಣೆ ಕಾಯ್ದೆಯ ಪ್ರಕಾರ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡವನ್ನು ನವಂಬರ್, 1, 1956 ರಂದು ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. 1999 ಉಡುಪಿ ಜಿಲ್ಲೆಯ ರಚನೆಯೊಂದಿಗೆ ದಕ್ಷಿಣ ಕನ್ನಡವನ್ನು ಮತ್ತೆ ವಿಭಜಿಸಲಾಯಿತು. 1981 ರಲ್ಲಿ ಈ ಪ್ರದೇಶಕ್ಕೆ ಬಂದ ಡಾಕ್ಟರ್ ಇದರ ಬಗ್ಗೆ ಒಂದು ವರದಿಯನ್ನು ಸಲ್ಲಿಸಿದ್ದಾರೆ.

**ಉತ್ತರ ಕನ್ನಡ ಜಿಲ್ಲೆಯ ವನ ದುಃಖ ಕಾನನ ಚಳುವಳಿ**

1920 ಉತ್ತರಕನ್ನಡ ಜಿಲ್ಲೆಯಲ್ಲಿ ಅರಣ್ಯ ಸಂರಕ್ಷಣೆಗಾಗಿ ನಡೆದ ಈ ಚಳುವಳಿಯು ಅರಣ್ಯ ಇಲಾಖೆಯ ನೌಕರರ ಕಿರುಕುಳದ ವಿರುದ್ಧ ನಡೆದ ಪ್ರತಿರೋಧವಾಗಿದೆ. ಪ್ರತಿ ವರ್ಷ ಅರಣ್ಯದ ಪ್ರದೇಶ ಕ್ಷಿಣಿಸಿದಾಗ ರೈತರು ಪರಿಸರ ಸಂರಕ್ಷಣೆಗಾಗಿ ನಡೆಸಿದ ಹೋರಾಟ ಹಿನ್ನೆಲೆಯನ್ನು ನೋಡುವುದಾದರೆ ಕುಮಟ ತಾಲೂಕಿನ ಕಲಗೇರಿ ಹಳಿಯಾಳು ಹಲಗೇರಿ ಮುಂದದ ಗ್ರಾಮಗಳಲ್ಲಿ ಅರಣ್ಯ ಇಲಾಖೆಯು ವೈಜ್ಞಾನಿಕ ಅರಣ್ಯ ನೀತಿ ಹೆಸರಿನಲ್ಲಿ ಶೇಕಡ 80 ರಷ್ಟು ಸ್ಥಳೀಯ ಪ್ರಾಕೃತಿಕ ಅರಣ್ಯವನ್ನು ಕಡಿದು ಅಲ್ಲಿ ವೇಗವಾಗಿ ಬೆಳೆಯುವ ಜಾಗದಲ್ಲಿ ಗಿಡಗಳನ್ನು ನೇಡುವ ಯೋಜನೆಯನ್ನು ಕೈಗೊಂಡಿತು. ಇದರಿಂದ ಸ್ಥಳೀಯರಿಗೆ ಅಗತ್ಯವಾದ ಹುಲ್ಲು, ಎಲೆ, ಮರದ ದಿಂಡುಗಳು, ಔಷಧಿ ಸಸ್ಯಗಳು, ಹಣ್ಣುಗಳು, ಮುಂತಾದ ಜೀವನೋಪಾಯದ ಮೂಲಗಳು ನಾಶವಾಗುವ ಭೀತಿ ಉಂಟಾಯಿತು. ಚಳುವಳಿಯ ಆರಂಭ ಈ ಚಳುವಳಿಯ ನೇತೃತ್ವವನು ಗಣಪತಿ ರಾವ್ ಬಯಸಿದ್ದರು. ರೈತರೊಂದಿಗೆ ಮಾತನಾಡಿದ ಅವರು ರೈತರದು ಕೃಷಿಕ ಬದುಕೇ ವಿನಃ ಕೈಗಾರಿಕೆ ಅಲ್ಲ ಕೃಷಿ ಕುಸಿತದಿಂದಾಗಿ ಕೃಷಿ ಭೂಮಿ ಪ್ರಮಾಣ ಪ್ರತಿ ವರ್ಷ ಕಡಿಮೆ ಆಗುತ್ತಿದೆ. ಕೃಷಿ ಉತ್ಪನ್ನ ಕುಂಥಿತದಿಂದಾಗಿ ಬಡತನ ರೈತರನ್ನು ಉತ್ಸಾಹಗೊಂದಿಸಿದೆ ಅರಣ್ಯ ಇಲಾಖೆಯು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಜಾರಿಗೆ ತಂದಿರುವ ಅರಣ್ಯ ಕ್ರಮಗಳು ರೈತರನ್ನು ಸಕಷ್ಟಕ್ಕಿಡು ಮಾಡಿದೆ ಎಂದರು. ರೈತರು ತಮ್ಮ ಜಾನುವಾರುಗಳನ್ನು ಮೇಯಿಸಲು ಎಂಟು ಕಿಲೋ ಮೀಟರ್ ಗಂಟಲಿಗೆ ಹೋಗಬೇಕಾಯಿತು.[6]

ರೈತರಿಗೆ ಬೇವಿನ ಪ್ರದೇಶವನ್ನು ಮೀತಿಗೊಳಿಸಲಾಯಿತು. ಅರಣ್ಯ ಪ್ರದೇಶಗಳೇ ಮಿತಿಯಲ್ಲಿರುವಾಗ ಸರ್ಕಾರ ಅರಣ್ಯದ ಹಕ್ಕು ಚಲಾಯಿಸಬಾರದೆಂದು ಹಾಗೂ ಬರಿ ಬಂಜರು ಪ್ರದೇಶದ ಮೇಲೆ ತೆರಿಗೆ ಹಾಕುವುದು, ತುಂಬಾ ದೂರದ ಅರಣ್ಯ ಪ್ರದೇಶಕ್ಕೆ ಅವರಿಗೆ ಅನುಮತಿ ನೀಡುವುದು ಅರಣ್ಯ ವಸ್ತುಗಳನ್ನು ತೆರಿಗೆ ಪಾವತಿಯ ಮೂಲಕವೇ ಪಡೆದುಕೊಳ್ಳಬೇಕಾಗಿತ್ತು. ಈ ಮೇಲಿನ ಎಲ್ಲಾ ಅಂಶಗಳು ರೈತರನ್ನು ಸಂಕಷ್ಟಕ್ಕೆ ದೂಡಿದವು, ಹಾಗಾಗಿ ರೈತರು ವಸಾಹತುಶಾಹಿ ಸರ್ಕಾರದ ವಿರುದ್ಧ ರೊಚ್ಚಿಗೆದ್ದರು.

---

[6] ಎಸ್ ಸಿ ಪಾಟೀಲ್,(2005), ಕರ್ನಾಟಕದಲ್ಲಿ ಸಬಾಲ್ಟರನ್ ರಾಜಕಾರಣ ಅರಣ್ಯ ಸತ್ಯಾಗ್ರಹ ಮತ್ತು ಕರಾನಿರಾಕರಣೆ, ಪ್ರಸಾರಾಂ ಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ.

**ಹುಲಬನ್ನಿ ಕರ ನಿರಾಕರಣ ಚಳುವಳಿ 1930**

ಹುಲಬನ್ನಿ ಎಂದರೆ ಕಾಡುಗಳಲ್ಲಿ ದನಗಳನ್ನು ಮೇಯಿಸಲಿ, ಮೇಯಿಸದಿರಲಿ ಸರ್ಕಾರಕ್ಕೆ ನೀಡುವ ನೇರ ತೆರಿಗೆಯಾಗಿತ್ತು. ಹೆಚ್ಚು ಕೃಷಿ ಅವಲಂಬಿತ ಪ್ರದೇಶವಾದ ಶಿರಸಿ, ಸಿದ್ದಾಪುರ, ಅಂಕೋಲಾ ಪ್ರದೇಶಗಳು ಮಲೇರಿಯಾ ಕಾಡಾನೆಗಳ ಕಾಟದಿಂದ ಬೆಳೆದ ಬೆಳೆಯು ನಾಶವಾಗುತ್ತಿತ್ತು. ರೈತರ ಸಂಕಷ್ಟಗಳಿಗೆ ಅರಣ್ಯ ಅಧಿಕಾರಿಗಳು ಸ್ಪಂದಿಸುತ್ತಿರಲಿಲ್ಲ. ಸರ್ಕಾರ ಹುಲಬನ್ನಿ ವಸೂಲಿಗೆ ಜಪ್ತಿ ಕ್ರಮವನ್ನು ಅನುಸರಿಸಲು ಮುಂದಾಗಿತ್ತು. ಹುಲಬನ್ನಿ ಕೊಡದಿದ್ದ ಮುದುಕನನ್ನು ರಾತ್ರಿಯಿಡೀ ಮೈ ಮೇಲಿನ ಬಟ್ಟೆಯನ್ನು ತೆಗೆದು ಹಾಕಿ ಕೂರಿಸಿದ್ದರೂ ಆ ಮುದುಕ ಹುಲಬನ್ನಿಯನ್ನು ಕೊಡಲು ನಿರಾಕರಿಸಿದನು.

ಕೊನೆಗೆ ಹುಲಬನ್ನಿ ಕರ ವಸೂಲಿ ಅವಧಿ ವಿಸ್ತರಣೆ ಮಾಡಬೇಕೆಂಬ ತತ್ವವನ್ನು ಕೊನೆಗೆ ಸರ್ಕಾರವು ಒಪ್ಪಿತು. ಈ ಹುಲಬನ್ನಿ ಕರ ನಿರಾಕರಣ ಚಳುವಳಿಗೆ ಪ್ರೋತ್ಸಾಹ ನೀಡಿದವರೆಂದರೆ ಹಮ್ಮಣ್ಣ ನಾಯ್ಕ, ಬಾವಿಕೇರಿ ರಾಮನಾಯ್ಕ, ಜೋಗಿನಾಯ್ಕ, ಬೀರಣ್ಣನಾಯಕ, ರಾಮಚಂದ್ರನಾಯಕ ಮುಂತಾದ ನಾಯಕರುಗಳು ಈ ಚಳುವಳಿಯನ್ನು ಯಶಸ್ವಿಗೊಳಿಸಿದರು. ಮಾಮಲಿದಾರರು ಹುಲಬನ್ನಿ ಕರ ನಿರಾಕರವನ್ನು ವಸೂಲಿ ಮಾಡಲು ಬಂದಾಗ ಸಾಮೂಹಿಕ ಬಹಿಷ್ಕಾರ ಹಾಕಿದರು. ಪಟೇಲನಿಗೆ ತೆರಿಗೆಯನ್ನು ವಸೂಲಿ ಮಾಡಲು ಒಬ್ಬ ಕೂಲಿ ಆಳು ಸಿಗದಂತಾಯಿತು. ಸರ್ಕಾರ ಹೊರಡಿಸಿದ್ದ ಹುಲಬನ್ನಿ ವ್ಯವಸ್ಥೆಯು ವಿಫಲವಾಯಿತು. ಹುಲಬನ್ನಿ ತೆರಿಗೆಯ ಗಡುವು ವಿಸ್ತರಣೆ ಹಾಗೂ ಕಾಡಿನಲ್ಲಿ ಜಾನುವಾರುಗಳನ್ನು ಮೇಯಿಸಲು ಕಾಡಿನ ಪ್ರಯೋಜನ ಪಡೆಯುವವರು ಮಾತ್ರ ಹುಲಬನ್ನಿ ಕರವಸೂಲಿ ಮಾಡಬೇಕೆಂಬ ತತ್ವಕ್ಕೆ ಸರ್ಕಾರ ಒಪ್ಪಿತು.

**ಶಿರಸಿ ಸಿದ್ದಾಪುರ ತಾಲ್ಲೂಕು ರೈತರ ಕರ ನಿರಾಕರಣೆ 1931**

ಮೊದಲೇ ಬ್ರಿಟಿಷರ ಅರಣ್ಯ ನೀತಿಗಳಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿದ ಶಿರಸಿ, ಸಿದ್ದಾಪುರ ತಾಲ್ಲೂಕಿನ ರೈತರು ಕಂದಾಯ ನೀಡಲು ವಿರೋಧಿಸಿದರು. ತಮ್ಮ ಬೆಳೆಗಳು ಕೈಗೆ ಬಂದಾಗ ತಗಲುವ ರೋಗ, ಪ್ರಾಣಿಗಳ ಹಾವಳಿ, ಪ್ರವಾಹ, ಬರಗಾಲ, ರೈತರನ್ನು ಶೋಚನಿಯವಾಗಿಸಿತು. 1925–26 ಅಲ್ಲಿ ಬ್ರಿಟಿಷರು ಕರ್ನಾಟಕದ ಅರಣ್ಯ ಮತ್ತು ರೈತ–ಜನಸಾಮಾನ್ಯರ ಬದುಕಿನ ಸಂಬಂಧಗಳನ್ನು ವಿಚಾರಣೆ ಮಾಡಲು ಕೋಲಿಂಗ್ ಸಮಿತಿಯನ್ನು ರಚಿಸಿದರು. ಈ ಸಮಿತಿಯ ಮುಖ್ಯಸ್ಥನಾಗಿ ಬ್ರಿಟಿಷ್ ಅಧಿಕಾರಿ ಕೂಲಿಂಗ್ ಇದ್ದನು. ಹಿನ್ನಲೆಯನ್ನು ನೋಡುವುದಾದರೆ 1920 ರ ದಶಕದಲ್ಲಿ ಉತ್ತರಕನ್ನಡ, ಶಿರಸಿ, ಯಲ್ಲಾಪುರ, ಕುಮಟಾ, ಸಿದ್ದಾಪುರ ಮುಂತಾದ ತಾಲ್ಲೂಕುಗಳಲ್ಲಿ ಅರಣ್ಯ ಕಾಯ್ದೆಗಳ ವಿರೋಧ ತೀವ್ರಗೊಂಡಿತ್ತು. ಜನರ ಜೀವನವೇ ಅರಣ್ಯಗಳ ಮೇಲೆ ಅವಲಂಬಿತವಾಗಿದ್ದರೂ, ಬ್ರಿಟಿಷರ ಅರಣ್ಯ ಇಲಾಖೆಯ ಕಠಿಣ ನಿಯಮಗಳಿಂದ ಜನರು ಹಾಲು, ಮೇವು, ಇಂದಿನ ಗಿಡಮರದ ಉತ್ಪನ್ನ, ಗೃಹ ಉಪಯೋಗಿ ವಸ್ತುಗಳನ್ನು ಪಡೆಯಲು ತೊಂದರೆ ಅನುಭವಿಸುತ್ತಿದ್ದರು. ವನ ದುಃಖ ಚಳುವಳಿ ಹಾಗೂ ಕರನಿರಾಕರಣ ಚಳುವಳಿಗಳು ನಡೆದ ಹಿನ್ನೆಲೆಯಲ್ಲಿ ಜನರ ಅಸಮಾಧಾನವನ್ನು ತಗಿಸಲು ಈ ಸಮಿತಿಯನ್ನು ನೇಮಿಸಲಾಯಿತು.[7]

**ಕೂಲಿಂಗ್ ವರದಿಯ ಶಿಫಾರಸ್ಸುಗಳು**

- ಅರಣ್ಯ ಉತ್ಪನ್ನಗಳ ಬಳಕೆ:– ಗ್ರಾಮೀಣ ಜನರಿಗೆ ಇಂಧನ, ಹಸುಮೇವು, ಗಿಡಮರದ ಉತ್ಪನ್ನಗಳನ್ನು ಪಡೆಯಲು ಸ್ವಲ್ಪ ಮಟ್ಟಿನ ವಿನಾಯಿತಿ ನೀಡಬೇಕು.

[7] Janaki Nair.,( 2011) Mysore: Modernityis, Misfortunes, (peasant, women, workers, Rebels,) permanent black. Ranikhet, uttarakhand.

- ಕರಬಾರ ಕಡಿತ:– ರೈತರು ಮೇಲೆ ಹೇರಲಾಗಿದ್ದ ಅರಣ್ಯ ತೆರಿಗೆ ಮತ್ತು ದಂಡಗಳನ್ನು ಕಡಿಮೆ ಮಾಡುವುದು. ಜನರು ಅರಣ್ಯ ಸಂಪನ್ಮೂಲಗಳಿಂದ ಜೀವನ ನಡೆಸಲು ಹಕ್ಕು ಹೊಂದಿರಬೇಕು ಎಂಬ ನಿಲುವನ್ನು ಸೂಚಿಸಿತು.
- ಆದಾಯಕ್ಕಿಂತ ಬದುಕಿಗೆ ಆದ್ಯತೆ:– ಸರ್ಕಾರ ಅರಣ್ಯದಿಂದ ಆದಾಯ ಗಳಿಸುವುದಕ್ಕಿಂತ ಮೊದಲು ಸ್ಥಳೀಯ ಜನರ ಬದುಕು ಹಾಗೂ ಅವಶ್ಯಕತೆಗಳನ್ನು ಪರಿಗಣಿಸಬೇಕೆಂದು ವರದಿ ಒತ್ತಾಯಿಸಿತು.

ಹಂದಿ, ಕಾಡಾನೆ, ಮಂಗಗಳ ಕಾಟ, ಬಂದೂಕು ಲೈಸೆನ್ಸ್‌ಗಳ ಆಭಾವ, ಮಲೇರಿಯ, ಬೆಲೆ ಕುಸಿತ, ಆದಾಯ ನಷ್ಟ, ಹೀಗೆ ರೈತರ ಸ್ಥಿತಿ ಹೀನಾಯವಾಗಿತ್ತು. ಹೀಗಾಗಿ ರೈತರ ಬದುಕಿನ ಗುಣಮಟ್ಟಕ್ಕೆ ಆದ್ಯತೆ ನೀಡಲು ಸೂಚಿಸಲಾಯಿತು.

**ಹಿರೇಕೆರೂರಿನ ಕರ ನಿರಾಕರಣೆ 1931**

ಭಾರತದ ಸ್ವಾತಂತ್ರ್ಯ ಹೋರಾಟವು ನಗರಗಳಿಗೆ ಮಾತ್ರ ಸೀಮಿತವಾಗಿರದೇ, ಗ್ರಾಮಾಂತರ ಪ್ರದೇಶಗಳಲ್ಲಿಯೂ ಪ್ರಬಲವಾಗಿ ಹರಡಿತ್ತು. ರೈತರ ಆರ್ಥಿಕ ಸಂಕಷ್ಟ, ಬ್ರಿಟಿಷರ ತೆರಿಗೆ ಹೇರಿಕೆಯ ನೀತಿ, ಸ್ವಾತ್ರಂತ್ರ್ಯದ ತವಕವೇ ಈ ಹೋರಾಟಗಳ ನೆಲೆಯಾಯಿತು. ಹೀಗೆ 1931 ರಲ್ಲಿ ಧಾರವಾಡ ಜಿಲ್ಲೆಯ ಹಿರೇಕೆರೂರಿನಲ್ಲಿ ನಡೆದ ಕರ ನಿರಾಕರಣ ಚಳುವಳಿ ಇದೇ ಹಾದಿಯ ಪ್ರಮುಖ ಭಾಗವಾಗಿತ್ತು. ರೈತರೆಲ್ಲರೂ ಒಂದು ಕಡೆ ಸೇರಿ ಕರ ನಿರಾಕರಣ ಚಳುವಳಿ ಇದೇ ಹಾದಿಯ ಪ್ರಮುಖ ಭಾಗವಾಗಿತ್ತು. ರೈತರೆಲ್ಲರೂ ಒಂದು ಕಡೆ ಸೇರಿ ಕರ ನಿರಾಕರಣ ಚಳುವಳಿಯ ಮುಖಂಡರನ್ನಾಗಿ ವೀರನಗೌಡರನ್ನು ಆಯ್ಕೆ ಮಾಡಿದರು. ಊರಿನ ಪ್ರಮುಖ ಮುಖಂಡರಾದ ಗುದ್ಲೆಪ್ಪ ಹಳ್ಳಿಕೇರಿ, ಕೆ.ಎಚ್.ಪಾಟೀಲ್, ಅವರುಗಳು ಈ ಆಂದೋಲಕ್ಕೆ ಬೆಂಬಲವಾಗಿ ನಿಂತುಕೊಂಡರು. ಶಿರಸಿ, ಸಿದ್ದಾಪುರ, ಹಿರೇಕೆರೂರು ತಾಲ್ಲೂಕು, ರೈತರ ಸ್ಥಿತಿಗಂಡು ಕಾಂಗ್ರೆಸ್ ನಾಯಕರು ಕೂಡ ಬೆಂಬಲಕ್ಕೆ ನಿಂತರು. 1931 ಜನವರಿ 25 ರಂದು ವಕೀಲರಾದ ಪಾವಟೇಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮುಂದಿನ ಕ್ರಮಗಳಿಗೆ ಚಿಂತಿಸಲಾಯಿತು. ಈ ಚಟುವಟಿಕೆಯನ್ನೆಲ್ಲ ಗಮನಿಸಿದ ಬ್ರಿಟಿಷ್ ರೈತರನ್ನು ಬಂದಿಸುವ ಎಚ್ಚರಿಗೆ ನೀಡಿದರು. ಗಾಂಧೀಜಿಯವರ ಅಸಹಕಾರ ಚಳುವಳಿ ಮತ್ತು ಕಾನೂನು ಭಂಗ ಚಳುವಳಿಗಳು ದಕ್ಷಿಣ ಭಾರತದ ರೈತರ ಮೇಲೆ ಹಾಗೂ ಅವರು ಹಮ್ಮಿಕೊಂಡಿದ್ದ ಕರನಿರಾಕರಣ ಚಳುವಳಿಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದವು.[8]

ಗಾಂಧಿಜಿಯವರ ಅನುಯಾಯಿ ಮೈಲಾರ ಮಹಾದೇವಪ್ಪ ರವರು ಕರ್ನಾಟಕದ ಭಾಗದ ಕರನಿರಾಕರಣ ಸ್ಥಳಗಳ ಬಗ್ಗೆ ಮಾಹಿತಿ ನೀಡುತ್ತಾ ಪ್ರಮುಖವಾಗಿ ಅಂಕೋಲಾ, ಶಿರಸಿ, ಸಿದ್ದಾಪುರ, ಹಿರೇಕೆರೂರು ಸ್ಥಳಗಳಲ್ಲಿ ಗಾಂಧೀಜಿ ಅವರನ್ನು ಅಧ್ಯಕ್ಷತೆ ವಹಿಸಲು, ಅವರ ಮುಂದಾಳತ್ವ ವಹಿಸಲು ಕೋರಿ ಈ ಸ್ಥಳಗಳಲ್ಲಿ ತಮ್ಮ ನಾಯಕತ್ವದ ಅವಶ್ಯಕತೆಯನ್ನು ತಿಳಿಸಿದ್ದರು. ಆದರೆ ಬ್ರಿಟಿಷರ ಗೌರ್ನರ್ ಜನರಲ್ ಲಾರ್ಡ್ ಇರ್ವಿನ್‌ನ ಬೇಡಿಕೆಯಂತೆ ಗಾಂಧೀಜಿಯವರು ಇರ್ವಿನ್‌ನೊಂದಿಗೆ ಒಪ್ಪಂದ ಮಾಡಿಕೊಂಡ ಕಾರಣ ಕರ ನಿರಾಕರಣ ಚಳುವಳಿಗಳು ಹಿನ್ನಡೆಯನ್ನು ಅನುಭವಿಸಿದವು. ಆದರೂ ಶಿರಸಿ, ಸಿದ್ದಾಪುರ, ಹಿರೇಕೆರೂರು ಸ್ಥಳಗಳಲ್ಲಿ ಕರನಿರಾಕರಣ ಚಳುವಳಿಗಳು ಜರುಗಿದವು. ರೈತರು ಧೈರ್ಯವಾಗಿ ಅಹಿಂಸಾ ಮಾರ್ಗದಲ್ಲಿ ಚಳುವಳಿಯನ್ನು ಮುಂದುವರೆಸಿದರು. ಅದರ ಪ್ರತಿಫಲವಾಗಿ ಹಿರೇಕೆರೂರಿನ ಭಾಗದ ಸುಮಾರು 50ಕ್ಕೂ ಮೇಲ್ಪಟ್ಟ ರೈತರ ಹೊಲಗಳನ್ನು ಸರ್ಕಾರ ಮುಟ್ಟುಗೋಲು

[8] ಎಂ.ಜಿ. ನಾಗರಾಜ್., (2006),ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು, ಸಹಸ್ರಮಾನ ಸಂಪುಟ 02, ಪ್ರಕಟಣೆ ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ– ವಿಧಾನಸೌಧ, ಬೆಂಗಳೂರು

ಹಾಕಿಕೊಂಡಿತು. ಹಲವಾರು ಮನೆಗಳನ್ನು ಜಪ್ತಿ ಮಾಡಿ, ಕೆಲವು ಮನೆಗಳ ಮೇಲೆ ನೋಟೀಸ್ ಕೂಡ ಅಂಟಿಸಿದರು. ಆದರೂ ರೈತರು ಯಾವುದಕ್ಕೂ ಬಗ್ಗಲಿಲ್ಲ. 1931 ರಲ್ಲಿ ಕರನಿರಾಕರಣ ಚಳುವಳಿ ತೀವ್ರಗೊಂಡಾಗ, ಬ್ರಿಟಿಷ್ ಆಡಳಿತವು ರೈತರ ಅಸಮಾಧಾನವನ್ನು ತಣಿಸಲು ಕೆಲವು ಮಟ್ಟದ ಸಮಾಧಾನ ನೀತಿಯನ್ನು ಅನುಸರಿಸಬೇಕಾಯಿತು. ಧಾರವಾಡ, ಹಿರೇಕೆರೂರು, ಶಿರಸಿ, ಸಿದ್ಧಾಪುರ ಮುಂತಾದ ತಾಲ್ಲೂಕುಗಳಲ್ಲಿ ರೈತರು ತೆರಿಗೆಯನ್ನು ಕಟ್ಟುವುದಿಲ್ಲ ಎಂದು ಹೋರಾಟ ನಡೆಸಿದ ಸಂದರ್ಭದಲ್ಲಿ ಕಮಿಷನರ್ ಸ್ಮಾರ್ಟ್ ಮತ್ತು ರಂಗನಾಥ ದಿವಾಕರ ನಡುವೆ ರೈತರ ಸಮಸ್ಯೆಗಳ ಕುರಿತ ಒಪ್ಪಂದವಾಯಿತು. ಕರದ ರಿಯಾಯಿತಿ ಸಡಿಲಿಕೆ, ರೈತರ ಆಸ್ತಿಪಾಸ್ತಿಗಳನ್ನು ಜಪ್ತಿ ಮಾಡುವ ಕ್ರಮಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವುದಾಗಿ ಹಾಗೂ ಕರ ನಿರಾಕರಣ ಚಳುವಳಿಯಲ್ಲಿ ಬಂಧಿಸಲ್ಪಟ್ಟ ಹಲವಾರು ನಾಯಕರನ್ನು ಬಿಡುಗಡೆ ಮಾಡಲು ಸ್ಮಾರ್ಟ್ ಭರವಸೆ ನೀಡಿದರು. ಹೀಗೆ ರೈತರು ನಡೆಸಿದ ಕರ ನಿರಾಕರಣ ಚಳುವಳಿಗಳು ಕ್ಲಿಷ್ಟಕರ ವಾತಾವರಣದಲ್ಲಿ ಫಲಪ್ರದವಾದವು.

**ರಾಮದುರ್ಗದ ಕರನಿರಾಕರಣ ಚಳುವಳಿ**

ರಾಮದುರ್ಗ ಮುಂಬಯಿ ಕರ್ನಾಟಕ ಪ್ರಾಂತ್ಯದ ಚಿಕ್ಕ ಸಂಸ್ಥಾನ, ರಾಮದುರ್ಗ, ಬೆಳಗಾವಿ ಜಿಲ್ಲೆಯ ಸಣ್ಣ ಪ್ರದೇಶವಾಗಿದ್ದು, ಸುಮಾರು ಅರ್ಧದಷ್ಟು ಹಳ್ಳಿಗಳು ಮಳೆಯಾಧಾರಿತ ಪ್ರದೇಶವಾಗಿದ್ದರಿಂದ ವ್ಯವಸಾಯಕ್ಕಾಗಿ ಮಳೆಯನ್ನೇ ಅವಲಂಬಿಸಿದ ಈ ಭಾಗದ ರೈತರು ಒಣ ಬೇಸಾಯ ಮಾಡುತ್ತಿದ್ದರು. ಹಾಗಾಗಿ ಮಳೆಯನ್ನೇ ಅವಲಂಬಿಸಿದ್ದರಿಂದ ಮಳೆಯ ಅನಿಶ್ಚಿತತೆಯು ಈ ಭಾಗದ ರೈತರನ್ನು ಸಂಕಷ್ಟಕ್ಕೀಡು ಮಾಡಿತ್ತು. ಬಹುಪಾಲು ಜನರು ಆಡಳಿತ ಭಾಷೆಯಾದ ಮರಾಠಿಯನ್ನು ಅರ್ಥ ಮಾಡಿಕೊಳ್ಳಲು ಕಷ್ಟ ಪಡುತ್ತಿದ್ದರು. ಮರಾಠಿ ಭಾಷೆಯನ್ನು ಬಲ್ಲವರು ಮಾತ್ರ ನೌಕರಿಯನ್ನು ಗಿಟ್ಟಿಸಿಕೊಳ್ಳುತ್ತಿದ್ದರು. ರಾಮರಾವ್ ಬಾವೆ ಎಂಬ ಕೊಂಕಣಿ ಬ್ರಾಹ್ಮಣ ಈ ಭಾಗದ ಅರಸನಾಗಿದ್ದನು. ಈತನ ಕಾಲದಲ್ಲಿ ರೈತರ ಶೋಷಣೆಯು ಮುಂದುವರೆಯಿತು. ಎಲ್ಲಾ ಅಧಿಕಾರಿಗಳು ರೈತರಿಂದ ತೆರಿಗೆ ಹಾಗೂ ವಿಪರೀತ ಬಡ್ಡಿಯನ್ನು ವಸೂಲು ಮಾಡುತ್ತಿದ್ದರು. ಬಸಪ್ಪ ಫಕೀರಪ್ಪ ಎಲ್ಲಿಗಾರ ಅವರ ನೇತೃತ್ವದಲ್ಲಿ ಹಳ್ಳಿಗಳ ರೈತರು ತೆರಿಗೆಯನ್ನು ನಿಷೇಧಿಸುವುದು ಸೇರಿ, ಹಲವಾರು ವಿಚಾರಗಳಿಗೆ ಸಂಬಂಧಿಸಿದಂತೆ, ಧರಣಿಯನ್ನು ಕೂತರು. ಬಸಪ್ಪ ನಾಗಪ್ಪ ಮಳವಳ್ಳಿ ಅವರ ನೇತೃತ್ವದಲ್ಲಿ ರಾಮದುರ್ಗ ಪ್ರಜಾ ಸಂಘವು ಕರಬಂದಿ ಚಳುವಳಿಯನ್ನು ನಡೆಸಲು ತೀರ್ಮಾನ ಮಾಡಲಾಯಿತು. ಸೈನ್ಯವನ್ನು ಕರೆಸಿ ಕರಬಂದಿ ಚಳುವಳಿಯನ್ನು ಹತ್ತಿಕ್ಕುವ ರಾಜ ಸಾಹೇಬರ ಯೋಜನೆಯು ಕೈಗೂಡಲಿಲ್ಲ. ಸಂಘವು ಅಧಿವೇಶನವನ್ನು ಏರ್ಪಡಿಸಿ 16 ನಿರ್ಣಯಗಳನ್ನು ಕೈಗೊಂಡಿತು. ಕೆಲವೊಂದು ಬೇಡಿಕೆಗಳ ಈಡೇರಿಕೆಗೆ ಶತಾಯಗತಾಯ ಪ್ರಯತ್ನ ಮಾಡಿತು.

ಪ್ರಮುಖ ಬೇಡಿಕೆಗಳೆಂದರೆ:

- ಭೂ ಕಂದಾಯವನ್ನು ಶೇಕಡ 50 ರಷ್ಟು ಕಡಿಮೆ ಮಾಡುವುದು.
- ಮರಾಠಿಯ ಬದಲಿಗೆ ಜನರ ಆಡು ಭಾಷೆಯಾದ ಕನ್ನಡವನ್ನೇ ಆಡಳಿತ ಭಾಷೆಯಾಗಿ ಮಾಡುವುದು.
- ಅನಾವಶ್ಯಕ ತೆರಿಗೆಗಳನ್ನು ತೆಗೆದು ಹಾಕುವುದು.
- ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಪೂರ್ಣಗೊಳಿಸುವುದು.

ಈ ಮೇಲಿನ ಬೇಡಿಕೆಗಳನ್ನು ಈಡೇರಿಸಲು ರೈತ ಸಂಘವು ಬಂದ್‌ಗೆ ಕರೆ ನೀಡಿತು. ರೈತರು ಸರ್ಕಾರದ ಬೆದರಿಕೆಗೆ ಬಗ್ಗದೇ ಇದ್ದಾಗ ಕಲಂ 144 ಸೆಕ್ಷನ್ ಹಾಕಿದರೂ ರೈತರು ನಿಯಮಗಳನ್ನು ಮುರಿದು ಜೈಲಿಗೆ ಹೋದರು. ಗಂಗಾಧರ ದೇಶಪಾಂಡೆ ಅವರ ನಿರ್ದೇಶನದಂತೆ ಶಂಕರರಾವ್

ದೇವ್ ಅವರು ವಕೀಲರೊಂದಿಗೆ ಚರ್ಚಿಸಿ ರಾಜ ಸಾಹೇಬರ ಮನವೊಲಿಸಲು ಯತ್ನಿಸಿದರು ಹಾಗೂ ರೈತರು ಸಂಘದ ಪ್ರತಿನಿಧಿಗಳೊಂದಿಗೆ ಸಂಸ್ಥಾನದಲ್ಲಿ ಆಗುವ ಖರ್ಚು ವೆಚ್ಚಗಳನ್ನು ರಾಜನ ದುಂದು ವೆಚ್ಚವನ್ನು ಅಂಕಿಅಂಶಗಳ ಸಮೇತ ವಿವರಿಸಿದರು. ರಾಜನೊಂದಿಗೆ ಮಾಡಿದ ಸಂಧಾನ ಪಲ ಕೊಡಲಿಲ್ಲ. ರೈತರು ಗುಂಪಾಗಿ ರಾಮದುರ್ಗಕ್ಕೆ ಬಂದು ಜೈಲಿನತ್ತ ಹೊರಟರು. ಪೊಲೀಸ್ ನವರು ಲಾಠಿ ಪ್ರಹಾರ ನಡೆಸಿದರು. ಜನರ ಮನೆಗಳನ್ನು, ಅಂಗಡಿಗಳನ್ನು ಲೂಟಿ ಮಾಡೀದರು. ರೈತರು ಜೈಲಿನ ಕಛೇರಿಗೆ ಬೆಂಕಿ ಇಟ್ಟರು. ರೈತರ ಶಾಂತಿಯುತ ಪ್ರತಿಭಟನೆಯು ಹಿಂಸಾತ್ಮಕ ರೂಪ ತಳೆಯಿತು. ಜನತೆಯು ಆರ್ಥಿಕ ದುಸ್ಥಿತಿಯೇ ರಾಮದುರ್ಗದ ಆಂದೋಲನದ ಉಗಮವಾಗಿತ್ತು. ನೆರೆಯ ಪ್ರದೇಶಗಳಿಗಿಂತ ಈ ಸಂಸ್ಥಾನದ ಭೂ ಕಂದಾಯವು 30 ರಷ್ಟು ಹೆಚ್ಚಾಗಿದ್ದು, 1925 ರ ಸುಮಾರಿಗೆ ಈ ಸಂಸ್ಥಾನದಲ್ಲಿ ಹಿತ್ತಲ ತೆರಿಗೆ (ಮೇವು ಸಂಗ್ರಹಿಸುವ ಸ್ಥಳದ ಮೇಲಿನ ತೆರಿಗೆ) ಹುಲ ಬನ್ನಿ ತೆರಿಗೆ (ದನಗಳು ಗುಡ್ಡಕ್ಕೆ ಮೇಯಲು ಹೋದರೆ ಪ್ರತಿದನಕ್ಕೆ ರು. 02 ರಂತೆ) ಜೊತೆಗೆ ಈ ಸಂಸ್ಥಾನದಲ್ಲಿ ತಲೆದೋರಿದ್ದ ಬರಗಾಲವು ಕೂಡ ರೈತರನ್ನು ಪ್ರತಿಭಟನೆಗೊಳ್ಳಲು ಉತ್ತೇಜಿಸಲಾಯಿತು. ರೈತರು ಅರಮನೆಯ ಮುಂದೆ ಪ್ರತಿಭಟಿಸಿದರು, ನಂತರ ರಾಜನು ಭೂ ಕಂದಾಯ ಬಾಕಿ ಎಲ್ಲವನ್ನು ರದ್ದುಗೊಳಿಸಲಾಗುವುದು. ಹೊಸ ಭೂ ಕಂದಾಯವನ್ನು ನಿಗಧಿಪಡಿಸಲಾಗುವುದು ಹಾಗೂ ಹಿತ್ತಲ ತೆರಿಗೆ ಮತ್ತು ಹುಲಬನ್ನಿ ತೆರಿಗೆಗಳನ್ನು ವಜಾ ಮಾಡುವುದಾಗಿ ರಾಜನು ಭರವಸೆ ನೀಡಿದನು. ಆದರೆ ರಾಜನ ಈ ನಿಯಮಗಳು ರಾಜ್ಯದಲ್ಲಿನ ಸ್ವಲ್ಪ ಜನರಿಗೆ ಮಾತ್ರ ಅನುಕೂಲವಾಗುತ್ತಿದ್ದವು. ರಾಮದುರ್ಗ ಕರ ನಿರಾಕರಣ ಚಳುವಳಿಯು ತೋರಿಸಿದ ಪ್ರಮುಖ ಪ್ರಭಾವವೆಂದರೆ .

ಭಾರತದ ಸ್ವಾತಂತ್ರ್ಯ ಹೋರಾಟವು ಕೇವಲ ನಗರಗಳಲ್ಲಿ ನಡೆದ ರಾಜಕೀಯ ಚಳುವಳಿಗಷ್ಟೆ ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ರೈತರ ಜೀವನವನ್ನು ಸ್ಪರ್ಶಿಸುವ ಸಾಮಾಜಿಕ ಆರ್ಥಿಕ ಚಳುವಳಿಯು ಆಗಿತ್ತು. ಕರ್ನಾಟಕದಲ್ಲಿ ವಿವಿಧ ಭಾಗಗಳಲ್ಲಿ 1930 ರ ದಶಕದಲ್ಲಿ ನಡೆದ ಕರ ನಿರಾಕರಣ ಚಳುವಳಿಗಳು ಈ ಹೋರಾಟದ ಪ್ರಮುಖ ಅಂಗವಾಗಿದ್ದವು. ಅದರಲ್ಲಿ ಒಂದು ಪ್ರಮುಖ ಘಟನೆ ಎಂದರೆ ರಾಮದುರ್ಗ ಕರ ನಿರಾಕರಣ ಚಳುವಳಿಯೂ ಒಂದು. ಭೋಗದ ಜೀವನ ನಡೆಸುವ ಅರಸರು ದುಡಿವ ರೈತ ಶಕ್ತಿ ಎದುರು ಸ್ಪರ್ಧಿಸದೆ ಪಾರಂಪರಿಕವಾಗಿ, ವಂಶ ಪಾರಂಪರಿಕವಾಗಿ ಅನುಭವಿಸಿಕೊಂಡು ಐಷಾರಾಮಿ ಜೀವನ ಶೈಲಿಯ ವಿರುದ್ಧ ನಡೆದ ಪ್ರತಿಭಟನೆ ಇದು. ಐಷಾರಾಮಿ ಜೀವನ ನೈತಿಕ ಮೌಲ್ಯಗಳನ್ನು ಕಳೆದುಕೊಂಡಾಗ ಆಳುವ ಅರಸರಿಗೆ ಉಳಿಯುವುದು ಕೇವಲ ಫಲಾಯನ ಮಾತ್ರ. ಹೀಗಾಗಿಯೇ ರಾಮದುರ್ಗದ ರಾಜನಿಗೆ ಒದಗಿದ ಸ್ಥಿತಿಯೂ ಕೂಡ ಇದೆ ಆಗಿತ್ತು.

**ಅಂಕೋಲ ರೈತರ ಕರ ನಿರಾಕರಣೆ 1931**

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಕರ್ನಾಟಕದ ಭಾರ್ದೋಲಿ ಎಂದು ಕರೆದರೆ ತಪ್ಪಾಗಲಾರದು. ಕರ ನಿರಾಕರಣೆಯು ಕಾಯ್ದೆ ಭಾಗದ ಕೊನೆಯ ಮೆಟ್ಟಿಲೆಂದು ಆಗ ಭಾವಿಸಲಾಗಿತ್ತು. ತುಂಬಾ ಅಪಾಯಕಾರಿ ಪ್ರತಿಭಟನಾ ವಿಧಾನಗಳಲ್ಲಿ ಕರಾ ನಿರಾಕರಣೆಯು ಒಂದು. ಉಪ್ಪಿನ ಸತ್ಯಾಗ್ರಹದಲ್ಲಿ ಕರ್ನಾಟಕದ ಸಮರ ಭೂಮಿಯಾಗಿ ಪ್ರಸಿದ್ಧಿ ಪಡಿದಿದ್ದು ಅಂಕೋಲ. ಕರ ನಿರಾಕರಣ ಚಳುವಳಿಯಲ್ಲಿ ಎರಡನೇ ಭಾರ್ದೋಲಿ ಎಂದು ಕೀರ್ತಿ ಪಡೆದಿದೆ. ಗಾಂಧೀಜಿಯವರ ಮಾಡು ಇಲ್ಲವೇ ಮಡಿ ಎಂಬ ನುಡಿಗೆ ಬದ್ಧರಾಗಿ ಹೋರಾಡಿ ಖ್ಯಾತಿ ಪಡೆದ ಸ್ಥಳ ಅದು ಅಂಕೋಲಾ. 1930 ಆಗಸ್ಟ್ 6 ರಂದು ಅರಣ್ಯ ಸತ್ಯಾಗ್ರಹ ಈ ಪ್ರದೇಶದಲ್ಲಿ ಪ್ರಾರಂಭವಾಯಿತು. ಈ ಸತ್ಯಾಗ್ರಹದಲ್ಲಿ ನಾಡವರು ಮತ್ತು ಹಾಲಕ್ಕಿ ಗೌಡರು ಉತ್ಸಾಹದಿಂದ ಭಾಗವಹಿಸಿದ್ದರು. ಪ್ರತಿ ಸೋಮವಾರ ಜಂಗಲ್

ಕಾಯ್ದೆ ಭಂಗ ಮಾಡುವ ತೀರ್ಮಾನ ತೆಗೆದುಕೊಂಡ ಜನರು, ಸಾಲಾಗಿ ಮೆರವಣಿಗೆ ರೂಪದಲ್ಲಿ ಅರಣ್ಯ ಪ್ರದೇಶವನ್ನು ಪ್ರವೇಶ ಮಾಡಿದರು. ನೂರು ಜನ ಪೊಲೀಸರು ಪ್ರತಿಭಟನಾಕಾರರನ್ನು ತಡೆದರು. ಜನರ ಕೈಯಲ್ಲಿರುವ ಕೊಡಲಿ ಕತ್ತಿಗಳನ್ನು ಕಸಿದುಕೊಂಡರು. ಸುಮಾರು 50 ಜನರನ್ನು ಬಂಧಿಸಿದರು. ಜನರು ರಾಷ್ಟ್ರೀಯ ಗೀತೆಗಳನ್ನು ಹಾಡುತ್ತಾ, ಎರಡು ತಾಸುಗಳ ಕಾಲ ಶಾಂತ ರೀತಿಯಲ್ಲಿಯೇ ಪ್ರತಿಭಟಿಸಿದರು. ಸಮಯ ಕಳೆದಂತೆ ಸಾವಿರಾರು ಜನ ಜಮಾಯಿಸಿದರು.[9]

ಪೊಲೀಸರಿಗೆ ಪ್ರತಿಭಟನಾಕಾರರನ್ನು ನಿಯಂತ್ರಿಸಲಾಗದೆ, ಸ್ಥಳದಲ್ಲಿರುವ ಎಲ್ಲರನ್ನೂ ಬಂಧಿಸಿ ತಾಲ್ಲೂಕು ಕಛೇರಿಗೆ ಕರೆತಂದು, ಆರು ಜನರನ್ನು ದಸ್ತಗಿರಿ ಮಾಡಿ ಉಳಿದವರನ್ನು ಬಿಡುಗಡೆ ಮಾಡಿದರು. ಜನರು ಜಯ ಘೋಷ ಕೂಗುತ್ತಾ ಕಾಡಿಗೆ ಹೋಗಿ ಕಡಿದ ಇಟ್ಟಿಗೆಗಳನ್ನು ಮೆರವಣಿಗೆಯಲ್ಲಿ ತಂದು ಅರಣ್ಯ ಸತ್ಯಾಗ್ರಹವನ್ನು ಭಂಗಗೊಳಿಸಿದರು. ಸತ್ಯಾಗ್ರಹದಲ್ಲಿ ಭಾಗವಹಿಸಿದ ಪ್ರಮುಖ ನಾಯಕರೆಂದರೆ ರಾಮನಾಯಕರು, ಅವರು ಕೊಟ್ಟಂತಹ ವಾಕ್ಯಗಳು ಚಳುವಳಿಯಲ್ಲಿ ಭಾಗವಹಿಸಿದ ಜನರನ್ನು ಮೈನವಿರೇಳುಸುತ್ತಿದ್ದವು. "ಅಳಿಯುವುದು ಕಾಯ ಉಳಿಯುವುದು ಕೀರ್ತಿ", ಎಂಬ ಭಾಷಣ ಮಾಡುವ ಮೂಲಕ ಕರನಿರಾಕರಣೆ ಸ್ವೀಕರಿಸುವುದು ನಮ್ಮ ಧರ್ಮ, ಹಾಗೆಯೇ ಬೆಟಗೇರಿ ಜೋಗಿ ನಾಯಕರು ಮಾತನಾಡಿ "ಈ ಧರ್ಮ ಯುದ್ಧದಲ್ಲಿ ಹೋರಾಡುವುದು ನಮ್ಮ ಧರ್ಮ ನಾಡವರ ಕ್ಷಾತ್ರ ವೃತ್ತಿಗೆ ಭೂಷಣ, ಇದು ನಮ್ಮ ಕರ್ತವ್ಯ ಎಂದು ಹುರಿದುಂಬಿಸಿದರು." ದಿವಾಕರರು ಸಭೆಯಲ್ಲಿದ್ದವರ ಅಭಿಪ್ರಾಯವನ್ನು ತಿಳಿಸಲು ವಿನಂತಿಸಿದಾಗ ಸೂರ್ವೆಯ ಬೋಮ್ಮಯ್ಯ ಸೊಕ್ಕನಾಯಕರು "ಯಾರು ಮಾಡಲು ಬಿಡಲಿ ನಾನು ಮಾತ್ರ ಮಹಾತ್ಮರನ್ನು ಸ್ಮರಿಸಿ ಕರ ನಿರಾಕರಣೆಯನ್ನು ಮಾಡಿಯೇ ಇರುತ್ತೇನೆಂದು ಪ್ರತಿಜ್ಞೆ ಮಾಡಿದರು." ಬೋಳೇ ದೇವಣ್ಣ ನಾಯಕರು ಎದ್ದು ನಿಂತು ಭೂಮಿ ಹೋದರೆ ಹೋಗಲಿ ಬೇಕಾದ ಆಪತ್ತು ಬರಲಿ ನಮ್ಮ ಊರಲ್ಲಿ ನಾವೊಬ್ಬನಂತೂ ಕರನಿರಾಕರಣೆ ಮಾಡಲು ಸಿದ್ಧನಿದ್ದೇನೆ. ಈ ವಯೋವೃದ್ದರ ದೀನ ನಿಲುವು ನಾಡವರ ಜನಾಂಗವನ್ನೇ ಪ್ರೇರೇಪಿಸಿತು.

ಸರ್ಕಾರದ ಪರವಾನಗಿ ಕರಬಂದಿ ತಡೆಯಲು ವಿವಿಧ ರೀತಿಯ ಪ್ರಯತ್ನಗಳು ಎದುರಾದವು. ಮಾಮಲೆದಾರರು ಹಳ್ಳಿಗೆ ಬಂದು ಜನರಿಗೆ ಕರಬಂದಿ ಮಾಡಬೇಡಿ ಎಂದು ಉಪದೇಶ ಮಾಡುತ್ತಿರುವಾಗ ಸೂರ್ವೆಯ ತಿಪ್ಪಕ್ಕ ಅಮ್ಮಣ್ಣ ನಾಯಕ ಎಂಬ ದಿಟ್ಟ ಮಹಿಳೆ ಮುಂದೆ ಬಂದು "ನಾವು ಮಹಾತ್ಮ ಗಾಂಧೀಜಿ ಅವರ ಮಾತಿನಿಂದ ಕರಬಂದಿ ನಡೆಸಿದ್ದೇವೆ, ಗಾಂಧೀಜಿಯವರಿಗಿಂತ ನೀವು ತಿಳಿದವರಲ್ಲ, ನಿಮ್ಮ ಒಂದು ಸರ್ಕಾರಿ ನೌಕರಿಗಾಗಿ, ಸ್ವರಾಜ್ಯಕ್ಕಾಗಿ ಅಡ್ಡ ಬಂದು ಪಾಪ ಕಟ್ಟಿಕೊಳ್ಳಬೇಡಿರಿ" ಎಂದಳು. ಪ್ರತಿಭಟನೆಯನ್ನು ಹತ್ತಿಕ್ಕಲು ಬಂದಾಗ ಅಶಿಕ್ಷಿತ ಮಹಿಳೆ ಇಂಗ್ಲೀಷ್ ಗೊತ್ತಿಲ್ಲದಿದ್ದರೂ ಗೋಬ್ಯಾಕ್ ಗೌರ್ನರ್ ಎಂದು ಘೋಷಣೆಯನ್ನು ಕೂಗಿ ಕಪ್ಪು ಬಾವುಟವನ್ನು ಹಾರಿಸಿದ ದಿಟ್ಟ ಮಹಿಳೆ ಕಣಗಿಲದ ಕಾಣಿ ಬೊಮ್ಮಕ್ಕನ ಸಾಹಸ ಧೈರ್ಯವನ್ನು ಮರೆಯುವಂತಿಲ್ಲ. ಹಳ್ಳಿಗಳಲ್ಲಿ ಅಧಿಕಾರಿಗಳಿಗೆ, ಪೊಲೀಸರಿಗೆ ಯಾವ ಸಹಕಾರವೂ ಸಿಗಲಿಲ್ಲ. ಸರ್ಕಾರದಿಂದ ಜಪ್ತಿಯ ಕ್ರಮಗಳು ಜರುಗಿದವು. ನಿತ್ಯದ ಅಡುಗೆಗಾಗಿ ಇದ್ದ ಅಕ್ಕಿ, ಪಾತ್ರೆಗಳನ್ನು, ಕೈಗೆ ಸಿಕ್ಕಂತಹ ವಸ್ತು, ಸೇರೆ, ಕೋಳಿ, ತೆಂಗಿನಕಾಯಿ ಹೀಗೆ ಜಪ್ತಿಯ ಹೆಸರಿನಲ್ಲಿ ಲೂಟಿ ಮಾಡಿದರು.

ಒಂದು ಕಡೆ ಸರ್ಕಾರ ತೀವ್ರವಾಗಿ ಜಪ್ತಿ ಕ್ರಮದ ಮೂಲಕ ಹಳ್ಳಿಗಳನ್ನು ಭಯ ಭೀತಿಗೊಳಿಸಿದರೆ, ಪೊಲೀಸರು ದಬ್ಬಾಳಿಕೆ ನಡೆಸುತ್ತಿದ್ದರು. ಹಗಲು ರಾತ್ರಿ ಎನ್ನದೆ ಊರು ಮನೆ ಕೇರಿಗಳಿಗೆ ಮುತ್ತಿಗೆ ಹಾಕುತ್ತಿದ್ದರು. ಮನೆಯಲ್ಲಿ ಮಲಗಿದ ಹೆಂಗಸರನ್ನು

[9] . ಶಾಂತ ರಾಮ ನಾಯಕ ಹಿರೇಗುತ್ತಿ (1998)ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆಯ ಪಾತ್ರ, ರಾಘವೇಂದ್ರ ಪ್ರಕಾಶನ, ಅಂಕೋಲ.

ಎಬ್ಬಿಸಿ ನಿಮ್ಮ ಗಂಡಸರನ್ನು ತೋರಿಸಿ ಎಂದು ಗದರಿಸುತ್ತಿದ್ದರು. ಭೂಮಿ, ಧನ, ಕರು ವಶಪಡಿಸಿಕೊಂಡಿದ್ದರಿಂದ ಉದ್ಯೋಗ, ವ್ಯವಸಾಯ ನಿಂತು ಹೋಯ್ತು. ಜಪ್ತಿಯಾದ ಮನೆಗಳಲ್ಲಿ ಪೊಲೀಸರು ವಾಸ ಮಾಡತೊಡಗಿದರು. ಅಂಕೋಲ ಕರನಿರಾಕರಣ ಚಳುವಳಿಯಲ್ಲಿ 400 ಖಾತೆದಾರರ 625 ಎಕರೆ ಭತ್ತದ ಗದ್ದೆ ಸರ್ಕಾರದ ಪಾಲಾಗಿತ್ತು. ಮನೆಯ ಹಿರಿಯರೆಲ್ಲ ಜೈಲಿಗೆ ಹೋದಾಗ ಮಕ್ಕಳು ಶಿವಮೊಗ್ಗ ಬಾಲಿಕಾಶ್ರಮ ಸೇರಿದರು. ವೀರ ನೆಲದ ವಿಶೇಷವೇನೆಂದರೆ ಹಿರಿಯರು, ಮಹಿಳೆಯರು, ಮಕ್ಕಳು ಎಲ್ಲರೂ ಚಳುವಳಿಯಲ್ಲಿ ಭಾಗಿಯಾದವರು.

**ಶಿರಾಳಕೊಪ್ಪ ರೈತರ ಹರತಾಳ 1931**

ರೈತ ಮುಖಂಡರಾದ ಸಿದ್ದಬಸಪ್ಪ ಸೊರಂಗಿ, ವೀರಬಸಪ್ಪ, ಎಂ.ಜಿ.ಹಿರೇಮಠ್, ಚನ್ನಬಸಪ್ಪ ಶೆಟ್ಟಿ ಹಾಗೂ ಖಾಸಿಂ ಸಾಹೇಬ್ ಮುಂತಾದವರು ತಾಳಗುಂದ ಹೋಬಳಿ, ಉಡುಗಣಿ ಹೋಬಳಿ, ಅಡಗಂಟಿ, ಬಿದರಕೊಪ್ಪ, ಸಿದ್ದಾಪುರ, ಚಿಕ್ಕಜಂಬೂರು, ಹಿರೇಜಂಬೂರು, ಭಕ್ತನಕೊಪ್ಪ, ದಾಸನಪುರ ಗ್ರಾಮಗಳಲ್ಲಿ ರೈತರು ಕಂದಾಯವನ್ನು ಪಾವತಿಸಲಾಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರಿಗೆ ಕಂದಾಯದಲ್ಲಿ ಅರ್ಧ ರಿಮಿಶನ್ ಒದಗಿಸುವ ಭರವಸೆ ಸಫಲವಾಗದೆ ರೈತರಿಗೆ ಕಳವಳವಾಯಿತು. 1930, 31 ರ ದಶಕದಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ರೈತರು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಹಾಗೂ ಜಮೀನುದಾರರ ಮತ್ತು ದೇಶಗೌಡರ ಶೋಷಣೆಯ ವಿರುದ್ಧವಾಗಿ ಹೋರಾಟ ನಡೆಸಿದರು. ಈ ಹಿನ್ನೆಲಯಲ್ಲಿಯೇ ಶಿರಾಳಕೊಪ್ಪ ರೈತರ ಚಳುವಳಿಯು ಮಹತ್ವದ ಸ್ಥಾನ ಪಡೆದಿದೆ. ಕಂದಾಯ ಅಧಿಕಾರಿಗಳು ರೈತರು ಸಲ್ಲಿಸುವ ಕಂದಾಯದಲ್ಲಿ ಅರ್ಧದಷ್ಟು ಪಾವತಿ ಮಾಡಲು ಅವಕಾಶ ನೀಡುವ ಭರವಸೆ ನೀಡಿದ್ದರು. ಆದರೆ ಅದು ಸಫಲವಾಗದೆ ಇದ್ದಾಗ ರೈತರು ಚಳುವಳಿ ನಡೆಸುವ, ಕಂದಾಯ ಕೊಡದಿರುವ ನಿರ್ಧಾರ ಮಾಡಿದರು. ರೈತರು ಇಲ್ಲಿಗೆ ಸುಮ್ಮನಾಗದೇ ಶಿರಾಳಕೊಪ್ಪದಲ್ಲಿ ದಿನಾಂಕ 26–07–1931 ರಂದು ಸಭೆ ಸೇರಿಸಿ ಕಂದಾಯ ಅಧಿಕಾರಿಗಳು ತಮ್ಮ ಭರವಸೆಯನ್ನು ಉಳಿಸಿಕೊಳ್ಳಲು ಮಾಡಬೇಕಾದ ಯೋಜನೆಗಳ ಬಗ್ಗೆ ಶ್ರೀ ತಿರುಮಲ ತಾತಾಚಾರ್ಯಶರ್ಮ ರವರನ್ನು ಸಭೆಗೆ ಅಧ್ಯಕ್ಷರನ್ನಾಗಿ ಮಾಡಿದರು.

ಇದೇ ಸಮಯದಲ್ಲಿ 200 ಜನ ಪೊಲೀಸರು ಹಿರೇಜಂಬೂರು ಪ್ರದೇಶದಲ್ಲಿ ಅನ್ಯಧರ್ಮಿಯರು, ಕೋಮುವಾದಿ ಗುಂಪುಗಳ ಜೊತೆ ಸೇರಿ ಜಪ್ತಿ ಎಂಬ ಕ್ರೂರ ಕೆಲಸಕ್ಕೆ ಕೈ ಹಾಕಿದರು. ಈ ಜಪ್ತಿ ಕಾರ್ಯದಲ್ಲಿ ಮನೆ ಮನೆಗೆ ಅಂದರೆ ಅಡುಗೆಮನೆ, ದೇವರ ಮನೆಗೆ ಪೊಲೀಸರು ಶೂ ಸಮೇತ ಮನೆಯೊಳಗಿನ ಧಾರ್ಮಿಕ ಕೇಂದ್ರಗಳನ್ನು ಅಪವಿತ್ರಗೊಳಿಸಿದರು. ಸಾಮಾನ್ಯ ಜನರಿಗೆ ನುಂಗಲಾರದ ತುತ್ತಾಯಿತು. ಹಿರೇಜಂಬೂರಿನ ಪ್ರಕರಣದಿಂದ ನೊಂದಂತಹ ಶಿರಾಳಕೊಪ್ಪದ ಜನರು 25–07–1931 ರಂದು ಹರತಾಳ ಆಚರಿಸಿದ ರೈತರು, ಸಭೆ ನಡೆಸಿದಾಗ ಜಿಲ್ಲಾಧಿಕಾರಿಗಳ ಆಜ್ಞೆಯಂತೆ ಗ್ರಾಮದಲ್ಲಿ ಮೂರು ತಿಂಗಳುಗಳ ಕಾಲ ಯಾವುದೇ ಸಭೆ, ಸಮಾರಂಭ, ಪ್ರತಿಭಟನೆ ಮಾಡಕೂಡದು ಎಂದು ಆಜ್ಞೆ ಆಗಿರುವುದರ ಬಗ್ಗೆ ಪೊಲೀಸರು ಸಭಿಕರನ್ನು ಮನವೊಲಿಸಿದರು. ಹೀಗೆ ರೈತರು ಸಂಯಮವನ್ನು ಕಾಯ್ದುಕೊಂಡರು. ಪೊಲೀಸರು, ಅಧಿಕಾರಿಗಳು ಎಷ್ಟೆ ದರ್ಪ ತೋರಿದರೂ ರೈತರು ಶಾಂತಿಯುತ ಪ್ರತಿಭಟನೆಯ ಮೂಲಕ ಮುಂದಿನ ಹರತಾಳ ಚಳುವಳಿಗೆ ಸ್ಫೂರ್ತಿಯಾದರು. ಹಾಗೆ 1931 ರಲ್ಲಿ ಕಾನಕಾನಾ ಹಳ್ಳಿಯಲ್ಲಿ ರೈತರ ಮಹಾ ಸಭೆ ನಡೆಯಿತು. ಸುಮಾರು 100 ರಿಂದ 120 ಜನ ರೈತರು ಸಭೆ ಸೇರಿ ರೈತ ಮುಖಂಡರಾದ ತೀ.ತಾ.ಶರ್ಮ, ಬೇಲೂರು ಶ್ರೀನಿವಾಸ ಅಯ್ಯಂಗಾರ್, ಉರಗ ನರಸಿಂಹರಾಯ ಗೌಡರು, ಬಿ.ಕೆ.ಗರುಡಾಚಾರ್ ಭೇಟಿ ಮಾಡಿ ಮುಂದಿನ ಕಾರ್ಯಕ್ರಮ ರೂಪುರೇಷೆಗಳ ಬಗ್ಗೆ ಚರ್ಚಿಸಿದರು.

ಗುರಿಕಾರ್ ವೆಂಕಟರಮಣ ಮಾತನಾಡಿದ ನಂತರ ಕಂದಾಯ ರಿಯಾಯಿತಿ, ಹುಲ್ಲುಗಾವಲು

ತೆರಿಗೆ, ಕಟ್ಟಿಗೆ ಸುಂಕ, ಒತ್ತುವರಿ ಜಮೀನು, ಜುಲ್ಮಾನೆ ದ್ರವ್ಯ ಮುಂತಾದವುಗಳಿಗೆ ಪರಿಹಾರ ನೀಡುವುದರ ಬಗ್ಗೆ ಗೊತ್ತುವಳಿಯಾದವು ಮತ್ತು ಮಾತು ಮುಂದುವರೆಸಿದ ಗುರಿಕಾರ್ ವೆಂಕಟಾರಮಣಗೌಡರು "ನ್ಯಾಯ ಸಮ್ಮತವಾಗಿ ಸರಿಯಾದ ಸಮಯಕ್ಕೆ ರೈತರಿಗೆ ರೈತರ ಸಮಸ್ಯೆಗಳಿಗೆ ಸ್ಪಂದಿಸುವಂತೆ ನಾವೆಲ್ಲರೂ ಶಾಂತಿಯುತವಾಗಿ ಸರ್ಕಾರದ ಗಮನಕ್ಕೆ ತರಬೇಕು. ಹೊರತು ಹಿಂಸಾತ್ಮಕ ರೂಪದಲ್ಲಿ ಬೇಡ, ಊರುಗಳಲ್ಲಿ ದನ ಕರುಗಳಿಗೆ ಮೇಯಿಸಲು ಮೇವಿಲ್ಲ. ರೈತರು ಹೊಟ್ಟೆಗೆ ಊಟವಿಲ್ಲದೆ ಸಾಯುತ್ತಿದ್ದಾರೆ. ರೈತರು ಜಾಸ್ತಿ ತೆರಿಗೆಯನ್ನು ಕಟ್ಟುತ್ತಿದ್ದಾರೆ. ಜಮೀನಿನ ಗುಂಟೆಯೊಂದಕ್ಕೆ 7 ರಿಂದ 12 ರೂಪಾಯಿಗಳವರೆಗೆ ತೆರಿಗೆಯನ್ನು ಹೆಚ್ಚಿಸಿದ್ದಾರೆ. ಈ ವಿಷಯವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಿ ಸರ್ಕಾರದ ಗಮನವನ್ನು ಸೆಳೆಯಬೇಕಾಗಿದೆ. ಹಳ್ಳಿಗಳ ಪಕ್ಕದಲ್ಲಿರುವ ಗೋಮಾಳ ಜಾಗವನು ಸರ್ಕಾರ ನಿಯಂತ್ರಣದಲ್ಲಿ ತೆಗೆದುಕೊಂಡು ಜನರು ಸೌದೆ, ಮೇವು, ಜಾನುವಾರುಗಳ ಸಾಕಾಣಿಕೆಗೆ ನಾಡಿನ ಉತ್ಪನ್ನಗಳನ್ನು ಉಪಯೋಗಿಸಲು ತೆರಿಗೆಯನ್ನು ಕಟ್ಟಬೇಕಾಗಿದೆ.: ಎಂದರು ನವಂಬರ್ 26, 1931 ರಂದು ರೈತರು ದೂರು ದುಮ್ಮಾನಗಳ ಸಮರ್ಥ ಪ್ರಾಥಮಿಕ ವಿಶ್ಲೇಷಣೆ ಮಾಡಲು ಹಾಗೂ ಸರ್ಕಾರದಿಂದ ಪರಿಹಾರವನ್ನು ಅಂತಿಮಗೊಳಿಸಲು ಡಾ. ಕೋಲ್ಮನ್ ರವರಿಗೆ ಪತ್ರ ಬರೆದು ಅರ್ಪಿಸಿ, ದಿವಾನರೊಡನೆ ಚರ್ಚಿಸಿ ವಿಷಯದ ಅಂತಿಮ ರೂಪವೇಷಗಳಿಗೆ ಬೇಡಿಕೆ ಇಟ್ಟರು.[10]

ಕೆಲವು ಬೇಡಿಕೆಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ:

- ಜಮಾಬಂದಿ ಕಾಲದಲ್ಲಿ ರೈತರ ಪಹಣಿಯನ್ನು ಅಮಲ್ದಾರರು ತಿದ್ದಿ ಅಧಿಕ ಆದಾಯ ತಮಗೆ ಬರುವಂತೆ ಮಾಡಿರುವುದು.
- ರೈತರು ಬೆಳೆದಿರುವ ಬೆಳೆಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುವುದು.
- ರೈತರ ಸ್ಥಿತಿಗತಿ, ಅವರು ಬೆಳೆದ ಬೆಳೆಯ ಬಗ್ಗೆ ವಿಚಾರಿಸದೆ ಅಮಲ್ದಾರರು ತಮಗೆ ಮನಸೋ ಇಚ್ಚೆ ವರದಿಯನ್ನು ಕಮಿಷನರಿಗೆ ಒಪ್ಪಿಸುವುದು ಸರಿಯಲ್ಲ.
- ಫೆಬ್ರವರಿ ಮಾಸದಲ್ಲಿ ರೈತರ ಸಂಕಷ್ಟಗಳನ್ನು ಅಧಿಕಾರಿಗಳಿಗೆ ತಿಳಿಸಿದರೂ ಈವರೆಗೆ ಪರಿಹಾರ ನೀಡಿಲ್ಲ.
- ಯಾವ ಪ್ರದೇಶದಲ್ಲಿ ಮಳೆಬಾರದಿಲ್ಲವೋ, ಬರಗಾಲವಿದೆಯೋ, ಅಂತಹ ಪ್ರದೇಶದಲ್ಲಿ ರೈತರಿಗೆ ತೆರಿಗೆಯಿಂದ ಶೇಕಡ 50ರಷ್ಟು ರಿಯಾಯಿತಿ ನೀಡುವುದು.

ಈ ಮೇಲಿನ ಎಲ್ಲಾ ಬೇಡಿಕೆಗಳನ್ನು ರೈತರು ಕಮಿಷನ್ ರವರಿಗೆ ತಿಳಿಸಿದರು. ಕಮಿಷನ್ನರು ರೈತರ ಬೇಡಿಕೆಗಳಿಗೆ ಸ್ಪಂದಿಸಿ ಪಹಣಿಗಳು ತಿದ್ದುಪಡಿಯಾಗಿದ್ದರೆ, ವಿಚಾರಣೆ ನಡೆಸೋಣ, ಯಾವ ಯಾವ ಹಳ್ಳಿಗೆ ತೆರಿಗೆಯಿಂದ ವಿನಾಯಿತಿ ಅಗತ್ಯವಿದೆಯೋ ಆ ಗ್ರಾಮಗಳ ಪಟ್ಟಿ ನೀಡಿ ಎಂದರು. ಈ ಮೂಲಕ ಈ ಶಿರಾಳಕೊಪ್ಪ ಹರತಾಳ ಸತ್ಯಾಗ್ರಹವು ಯಶಸ್ವಿಯಾಗಲು ರೈತರ ಶ್ರಮ ಅಪಾರವಾದದ್ದು.

**ಇರ್ವಿನ್ ನಾಲಾ ರೈತ ಚಳುವಳಿ (1931–32)**

ಮೈಸೂರು ಸಂಸ್ಥಾನದ ಇತಿಹಾದಲ್ಲಿ ಇರ್ವಿನ್ ನಾಲಾ ರೈತ ಚಳುವಳಿ (1931–32) ಒಂದು ಮೈಲಿಗಲ್ಲು. ಇದು ಕೇವಲ ಕಂದಾಯ ವಿರೋಧಿ ಚಳುವಳಿಯಾಗಿರದೆ, ರೈತರ ಆತ್ಮಗೌರವ ಮತ್ತು ಬ್ರಿಟಿಷ್ ಮಾದರಿಯ ಆಡಳಿತದ ವಿರುದ್ಧದ ಧ್ವನಿಯಾಗಿತ್ತು. 1930 ರ ದಶಕವು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅತ್ಯಂತ ನಿಣಾಯಕ ಕಾಲಘಟ್ಟ, ಒಂದೆಡೆ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ 'ಸವಿನಯ ಕಾಯಿದೆ ಭಂಗ ಚಳುವಳಿ'

[10] ಎಚ್.ಎಸ್. ದೊರೆಸ್ವಾಮಿ (2010), ರೈತ ಬದುಕು ಮತ್ತು ಹೋರಾಟ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

ದೇಶಾದ್ಯಂತ ಹರಡಿದ್ದರೆ, ಮತ್ತೊಂದೆಡೆ ಜಾಗತಿಕ ಆರ್ಥಿಕ ಹಿಂಜರಿತವು ಕೃಷಿ ವಲಯವನ್ನು ತತ್ತರಿಸುವಂತೆ ಮಾಡಿತ್ತು. ಮೈಸೂರು ಸಂಸ್ಥಾನದ ಮಂಡ್ಯ ಜಿಲ್ಲೆಯಲ್ಲಿ (ಅಂದಿನ ಮೈಸೂರು ಜಿಲ್ಲೆಯ ಭಾಗ) ಇರ್ವಿನ್ ನಾಲಾ (ಇಂದಿನ ವಿಶ್ವೇಶ್ವರಯ್ಯ ನಾಲಾ) ಅಚ್ಚುಕಟ್ಟು ಪ್ರದೇಶದ ರೈತರು ಹೂಡಿದ ಹೋರಾಟವು ಕರ್ನಾಟಕದ ರೈತ ಚಳುವಳಿಗಳ ಇತಿಹಾಸದಲ್ಲಿ "ಪ್ರಥಮ ಸಂಘಟಿತ ರೈತ ಚಳುವಳಿ" ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**ಚಳುವಳಿಯ ಹಿನ್ನಲೆ ಮತ್ತು ಕಾರಣಗಳು**

- ಕೃಷ್ಣರಾಜ ಸಾಗರ ಅಣೆಕಟ್ಟಿನ ನಿರ್ಮಾಣದ ನಂತರ, ಮಂಡ್ಯ ಭಾಗದ ಒಣ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ಇರ್ವಿನ್ ನಾಲಾ (ಆಗಿನ ವೈಸರಾಯ್ ಲಾರ್ಡ್ ಇರ್ವಿನ್ ಹೆಸರಿನಲ್ಲಿ) ನಿರ್ಮಿಸಲಾಯಿತು. ಆದರೆ, ಈ ನೀರಾವರಿ ಸೌಲಭ್ಯವು ರೈತರಿಗೆ ವರವಾಗುವ ಬದಲು ತಕ್ಷಣಕ್ಕೆ ಶಾಪವಾಗಿ ಪರಿಣಮಿಸಿತು.

- ನೀರಿನ ತೆರಿಗೆ: ಸರ್ಕಾರವು ನೀರಾವರಿ ಪ್ರದೇಶದ ರೈತರ ಮೇಲೆ ಭಾರೀ ಪ್ರಮಾಣದ ನೀರಿನ ತೆರಿಗೆಯನ್ನು ವಿಧಿಸಿತು. ಪ್ರತಿ ಎಕರೆಗೆ ಸುಮಾರು 10 ರಿಂದ 15 ರೂಪಾಯಿಗಳಷ್ಟು ತೆರಿಗೆ ವಿಧಿಸಲಾಗಿತ್ತು. ಇದು ಅಂದಿನ ಕಾಲಕ್ಕೆ ಅತ್ಯಂತ ದೊಡ್ಡ ಮೊತ್ತವಾಗಿತ್ತು.

- ಆರ್ಥಿಕ ಹಿಂಜರಿತ: 1929 ರ ಜಾಗತಿಕ ಆರ್ಥಿಕ ಕುಸಿತದಿಂದಾಗಿ ಕೃಷಿ ಉತ್ಪನ್ನಗಳ ಬೆಲೆಗಳು ಶೇ. 50ಕ್ಕಿಂತ ಹೆಚ್ಚು ಕುಸಿದಿದ್ದವು. ರೈತರು ಬೆಳೆದ ಬೆಳೆಗೆ ಕನಿಷ್ಟ ಬೆಲೆಯೂ ಸಿಗದಂತಾಯಿತು.

- ಕಡ್ಡಾಯ ಕಬ್ಬು ಬೆಳೆಯುವ ನೀತಿ: ಸರ್ಕಾರವು ಸಕ್ಕರೆ ಕಾರ್ಖಾನೆಯ ಲಾಭಕ್ಕಾಗಿ ರೈತರು ಕಡ್ಡಾಯವಾಗಿ ಕಬ್ಬು ಬೆಳೆಯಬೇಕೆಂದು ಒತ್ತಡ ಹೇರುತ್ತಿತ್ತು. ಆದರೆ ಕಬ್ಬು ದೀರ್ಘಕಾಲದ ಬೆಳೆಯಾಗಿದ್ದು, ತಕ್ಷಣದ ಆದಾಯಕ್ಕೆ ಪೂರಕವಾಗಿರಲಿಲ್ಲ.

- ಜಮೀನ್ದಾರಿ ಮತ್ತು ಸಾಲದ ಸುಳಿ: ಬೆಲೆ ಕುಸಿತದಿಂದಾಗಿ ರೈತರು ಸಾಲಗಾರರಾದರು. ಕಂದಾಯ ಪಾವತಿಸಲು ಅಸಾಧ್ಯವಾದಾಗ ಸರ್ಕಾರವು ಜಪ್ತಿ ಕ್ರಮಗಳಿಗೆ ಮುಂದಾಯಿತು.

ಈ ಸಂಕಷ್ಟದ ಸಮಯದಲ್ಲಿ ರೈತರನ್ನು ಸಂಘಟಿಸಲು ಮುಂದೆ ಬಂದವರು ಹೆಚ್.ಕೆ.ವೀರಣ್ಣಗೌಡರು, ಇವರೊಂದಿಗೆ ಸಾಹುಕಾರ್ ಚೆನ್ನಯ್ಯ, ಎ.ಜಿ.ರಾಮಚಂದ್ರರಾವ್ ಮುಂತಾದ ನಾಯಕರು ಕೈಜೋಡಿಸಿದರು. 1931 ರ ಜನವರಿ 18 ರಂದು ಮಂಡ್ಯದಲ್ಲಿ ರೈತರ ಬೃಹತ್ ಸಭೆ ನಡೆಯಿತು.

**ಹೋರಾಟದ ಹಾದಿ (1931–32)**

ಚಳುವಳಿಯು ಮುಖ್ಯವಾಗಿ ಮೂರು ಹಂತಗಳಲ್ಲಿ ನಡೆಯಿತು:

- ಮನವಿ ಸಲ್ಲಿಸುವಿಕೆ: ಆರಂಭದಲ್ಲಿ ರೈತರು ಮೈಸೂರಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಸಿಲ್ ಅವರಿಗೆ ಮನವಿ ಸಲ್ಲಿಸಿದರು. "ಬೆಲೆಗಳು ಕುಸಿದಿವೆ, ನಾವು ತೆರಿಗೆ ಪಾವತಿಸಲು ಅಶಕ್ತರಾಗಿದ್ದೇವೆ, ದಯವಿಟ್ಟು ಕಂದಾಯ ಮನ್ನಾ ಮಾಡಿ" ಎಂದು ಕೋರಿದರು. ಆದರೆ ಸರ್ಕಾರವು "ನೀರಾವರಿ ಸೌಲಭ್ಯ ನೀಡಲಾಗಿದೆ, ಆದ್ದರಿಂದ ತೆರಿಗೆ ನೀಡಲೇಬೇಕು" ಎಂದು ಕಠಿಣ ನಿಲುವು ತಳೆಯಿತು.

- ಸತ್ಯಾಗ್ರಹ ಮತ್ತು ಜೈಲು ಭರ್ತಿ: ಸರ್ಕಾರದ ಮೊಂಡುತನದ ವಿರುದ್ಧ ರೈತರು ಅಸಹಕಾರ ಚಳುವಳಿ ಆರಂಭಿಸಿದರು. ಕಂದಾಯ ನೀಡಲು ನಿರಾಕರಿಸಿದರು. ಅಧಿಕಾರಿಗಳು ಜಪ್ತಿ ಮಾಡಲು ಬಂದಾಗ ರೈತರು ಸಂಘಟಿತರಾಗಿ ವಿರೋಧಿಸಿದರು. ಮಂಡ್ಯ,

ಮದ್ದೂರು ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳಲ್ಲಿ ಚಳುವಳಿ ತೀವ್ರಗೊಂಡಿತು.

- ಬೆಂಗಳೂರು ಚಲೋ (1932) ಚಳುವಳಿಯ ಅತ್ಯಂತ ಪ್ರಮುಖ ಘಟ್ಟವೆಂದರೆ ರೈತರು ಮಂಡ್ಯದಿಂದ ಬೆಂಗಳೂರಿಗೆ ನಡೆಸಿದ ಪಾದಯಾತ್ರೆ, ಸಾವಿರಾರು ರೈತರು ನಡೆದುಕೊಂಡು ಹೋಗಿ ಬೆಂಗಳೂರಿನ 'ಕೌನ್ಸಿಲ್ ಚೇಂಬರ್' ಎದುರು ಪ್ರತಿಭಟನೆ ನಡೆಸಿದರು. ಇದು ಅಂದಿನ ಮೈಸೂರು ಸರ್ಕಾರವನ್ನು ಬೆಚ್ಚಿಬೀಳಿಸಿತು.[11]

**ಸರ್ಕಾರದ ದಮನಕಾರಿ ನೀತಿ**

ಸರ್ಕಾರವು ಚಳುವಳಿಯನ್ನು ಹತ್ತಿಕ್ಕಲು ಸೆಕ್ಷನ್ 144 ಜಾರಿಗೊಳಿಸಿತು. ಹೆಚ್.ಕೆ.ವೀರಣ್ಣಗೌಡ ಸೇರಿದಂತೆ ಪ್ರಮುಖ ನಾಯಕರನ್ನು ಬಂಧಿಸಿ ಜೈಲಿಗಟ್ಟಲಾಯಿತು. ಅನೇಕ ರೈತರ ಜಮೀನುಗಳನ್ನು ಹರಾಜು ಹಾಕಲಾಯಿತು. ಆದರೂ ರೈತರ ಛಲ ಕುಗ್ಗಲಿಲ್ಲ.

**ಚಳುವಳಿಯ ಫಲಿತಾಂಶಗಳು**

ರೈತರು ಸತತ ಹೋರಾಟ ಮತ್ತು ಹೆಚ್ಚುತ್ತಿದ್ದ ಜನಪ್ರಿಯ ಅಸಮಾಧಾನವನ್ನು ಕಂಡ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಧ್ಯಪ್ರವೇಶಿಸಿದರು.

- ತೆರಿಗೆ ಕಡಿತ: ಸರ್ಕಾರವು ನೀರಿನ ತೆರಿಗೆಯನ್ನು ಭಾಗಶಃ ಕಡಿತಗೊಳಿಸಲು ಒಪ್ಪಿತು.
- ಬಾಕಿ ಮನ್ನಾ: ಹಳೆಯ ಬಾಕಿ ಕಂದಾಯದಲ್ಲಿ ರಿಯಾಯಿತಿ ನೀಡಲಾಯಿತು.
- ಸಕ್ಕರೆ ಕಾರ್ಖಾನೆ ಸ್ಥಾಪನೆ: ರೈತರಿಗೆ ಅನುಕೂಲವಾಗಲು 1933 ರಲ್ಲಿ ಮಂಡ್ಯದಲ್ಲಿ 'ಮೈಸೂರು ಸಕ್ಕರೆ ಕಾರ್ಖಾನೆ'ಸ್ಥಾಪಿಸಲು ತೀರ್ಮಾನಿಸಲಾಯಿತು. ಇದು ರೈತರ ಆರ್ಥಿಕ ಸ್ಥಿತಿ ಸುಧಾರಿಸಲು ಸಹಕಾರಿಯಾಯಿತು.

**ಐತಿಹಾಸಿಕ ಮಹತ್ವ**

ಇರ್ವಿನ್ ನಾಲಾ ಚಳುವಳಿಯು ಕೇವಲ ಮಂಡ್ಯಕ್ಕೆ ಸೀಮಿತವಾಗಲಿಲ್ಲ. ಇದು ಇಡೀ ಕರ್ನಾಟಕದಲ್ಲಿ ರೈತ ಶಕ್ತಿಯನ್ನು ಪರಿಚಯಿಸಿತು. ಈ ಚಳುವಳಿಯಿಂದ ರೈತರಲ್ಲಿ ರಾಜಕೀಯ ಪ್ರಜ್ಞೆ ಮೂಡಿತು ಮತ್ತು ಅವರು ರಾಷ್ಟ್ರೀಯ ಕಾಂಗೆಸ್‌ನೊಂದಿಗೆ ಗುರುತಿಸಿಕೊಳ್ಳಲು ಆರಂಭಿಸಿದರು. ಗಾಂಧೀಜಿಯವರ ಅಹಿಂಸಾ ತತ್ವದ ಅಡಿಯಲ್ಲಿ ನಡೆದ ಯಶಸ್ವಿ ರೈತ ಹೋರಾಟವಿದು.

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ ಕಂಬಾರ. (2013). ನಮ್ಮ ಕೃಷಿ ಸಂಸ್ಕೃತಿ. ಅಂಕಿತ ಪ್ರಕಾಶನ.
- ದೊರೆಸ್ವಾಮಿ, ಎಚ್.ಎಸ್. (2010). ರೈತ ಬದುಕು ಮತ್ತು ಹೋರಾಟ, ಸಾಹಿತ್ಯ ಪ್ರಕಾಶನ.
- ನಾಗರಾಜ್, ಎಂ.ಜಿ. (2006). *ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು.* ಸಹಸ್ರಮಾನ ಸಂಪುಟ 02, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ– ವಿಧಾನಸೌಧ.
- ನಾಗರಾಜ್, ಎಂ.ಜಿ. (2006). *ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು.* ಸಹಸ್ರಮಾನ ಸಂಪುಟ 03, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ– ವಿಧಾನಸೌಧ
- ನಟರಾಜು ಹುಳಿಯಾರ್. (2005). *ಗಾಂಧಿ ಮತ್ತು ಕರ್ನಾಟಕದ ರೈತ ಚಳುವಳಿ.* ಅಕ್ಷರ ಪ್ರಕಾಶನ.
- ಪಾಟೀಲ್, ಎಸ್.ಸಿ (2005), *ಕರ್ನಾಟಕದಲ್ಲಿ ಸಬಾಲ್ಟರನ್ ರಾಜಕಾರಣ ಅರಣ್ಯ ಸತ್ಯಾಗ್ರಹ*


[11] ನಟರಾಜು ಹುಳಿಯಾರ್,(2005), ಗಾಂಧಿ ಮತ್ತು ಕರ್ನಾಟಕದ ರೈತ ಚಳುವಳಿ, ಅಕ್ಷರ ಪ್ರಕಾಶನ, ಸಾಗರ.

*ಮತ್ತು ಕರಾನಿರಾಕರಣೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ.

- ರಹಮತ್ ತರೀಕೆರೆ. (2012). *ಕರ್ನಾಟಕ ರೈತ ಚಳುವಳಿಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಶಾಂತ ರಾಮ ನಾಯಕ ಹಿರೇಗುತ್ತಿ. (1998). *ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲೆಯ ಪಾತ್ರ.* ರಾಘವೇಂದ್ರ ಪ್ರಕಾಶನ, ಅಂಕೋಲ.
- Gyanenndra pandey. (1978). *Peasant and nationalism in colonial India.* Oxford university press.
- Janaki Nair. ( 2011). *Mysore: Modernityis, Misfortunes, (peasant, women, workers, Rebels,) permanent black*. Ranikhet, uttarakhand.
- Meena Radhakrishna. (2001). *Dishonoured by history criminal tribes and British colonial policy*. Orient blackswan.
- Ranajith Guha. (1983). *The elementary aspects of peasant insurgency in colonial India.* Oxford university press.